ಶತಕದತ್ತ ಓಟ... ತೊಂಬತ್ತರ ನೋಟ

skjanaraguru@gmail.com

ಸಂಯುಕ್ತ ಕರ್ನಾಟಕ

ಹದಿಹರೆಯದವರಿಗೆ ಅರಿವಿನ ಹರಿವು
ಜ್ಞಾನ ಗುರು
ವಿದ್ಯಾರ್ಥಿ ಸಂಚಿಕೆ
ಬೆಲೆ ₹1

ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ಕಲಬುರಗಿ । ದಾವಣಗೆರೆ । ಬಾಗಲಕೋಟೆ । ಬೆಳಗಾವಿ ।

ಮಂಗಳವಾರ 5 ಮೇ 2026
ಪುಟ-08
ಸಂಪುಟ: 68
ಸಂಚಿಕೆ: 99

ಶುಭ ನುಡಿ
ಇತರರಂತೆ ಇರುವುದಕ್ಕಿಂತ, ನಿಮ್ಮದೇ ಆದ ವಿಶಿಷ್ಟ ದಾರಿಯನ್ನು ರೂಪಿಸಿಕೊಳ್ಳಿ.

ಓದು ಕಲಿಕೆ

2 ಹತ್ತರ ನಂತರ ಹತ್ತಲು ಹಲವು ಶೈಕ್ಷಣಿಕ ಹಾದಿಗಳು

ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶಿ 6-7

4 ಎಲ್ಲ ಪ್ರಾಣಿಗಳನ್ನು ಪ್ರೀತಿಸೋಣ

5 ಸಮಾಜಕ್ಕೆ ಅಂಟಿದ ಗೆದ್ದಲು ಬಿಡುವುದು ಯಾವಾಗ?

8 ನಾವು ಕಳೆದುಕೊಳ್ಳುವುದೇನು, ಉಳಿಸಿಕೊಳ್ಳುವುದೇನು?

11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳ ಕಲಿಕೆ ಇನ್ನು ಸುಲಭ

ಡಿಜಿಟಲ್ ವಿಧಾನಗಳ ಮೂಲಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ

ವಿದ್ಯಾರ್ಥಿಗಳ ಸುಲಭ ಕಲಿಕೆಗೆ NCERT ಹೊಸ ಯೋಜನೆ

ನವದೆಹಲಿ: 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಸುಲಭ ಮತ್ತು ಸರಳಗೊಳಿಸಲು ಮಹತ್ವದ ಉಪಕ್ರಮವನ್ನು ತೆಗೆದುಕೊಳ್ಳಲಾಗಿದೆ. ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT) ಡಿಜಿಟಲ್ ವಿಧಾನಗಳ ಮೂಲಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಿರುವ ಉಚಿತ ಆನ್‌ಲೈನ್ ಕೋರ್ಸ್‌ಗಳನ್ನು ಪ್ರಾರಂಭಿಸಿದೆ.

ಈ ಕೋರ್ಸ್‌ಗಳನ್ನು SWAYAM ವೇದಿಕೆಯ ಮೂಲಕ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಅಧ್ಯಯನ ಮಾಡಬಹುದಾಗಿದೆ. ಈ ಉಪಕ್ರಮವು ವಿದ್ಯಾರ್ಥಿಗಳಿಗೆ ವಿಷಯಗಳ ಬಗ್ಗೆ ಆಳವಾದ ತಿಳಿವಳಿಕೆಯನ್ನು ಒದಗಿಸುವುದಲ್ಲದೆ, ಮನೆಯಿಂದಲೇ ತಮ್ಮ ಸಿದ್ಧತೆಯನ್ನು ಬಲಪಡಿಸಲು ಮತ್ತು ಭವಿಷ್ಯದ ಪರೀಕ್ಷೆಗಳಿಗೆ ತಮ್ಮನ್ನು ತಾವು ಉತ್ತಮವಾಗಿ ಸಿದ್ಧಪಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಜೊತೆಗೆ, ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಉತ್ತೇಜಿಸುತ್ತವೆ.

ಡಿಜಿಟಲ್ ಶಿಕ್ಷಣದ ಕ್ರಾಂತಿ

ಎನ್‌ಸಿಇಆರ್‌ಟಿ ಡಿಜಿಟಲ್ ಶಿಕ್ಷಣದತ್ತ ದಿಟ್ಟ ಹೆಜ್ಜೆ ಇಟ್ಟಿದ್ದು, "SWAYAM" ಮತ್ತು "PM eVidya" ಮುಂತಾದ ಯೋಜನೆಗಳ ಮೂಲಕ ವಿದ್ಯಾರ್ಥಿಗಳಿಗೆ ಉಚಿತ ಆನ್‌ಲೈನ್ ಕೋರ್ಸ್‌ಗಳನ್ನು ನೀಡಲಾಗುತ್ತಿದೆ. 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಉಚಿತವಾಗಿ ಈ ಕೋರ್ಸ್‌ಗಳನ್ನು ಕಲಿಯಬಹುದು.

ಯಾವ ವಿಷಯಗಳಲ್ಲಿ ಕೋರ್ಸ್‌ಗಳು ಲಭ್ಯವಿರುತ್ತವೆ?

ಈ ಕಾರ್ಯಕ್ರಮವು ಲೆಕ್ಕಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಭೌತಶಾಸ್ತ್ರ, ಗಣಿತ, ಮನೋವಿಜ್ಞಾನ, ಸಮಾಜಶಾಸ್ತ್ರ, ವ್ಯವಹಾರ ಅಧ್ಯಯನ (ಬ್ಯುಸಿನೆಸ್ ಸ್ಟಡೀಸ್) ಮತ್ತು ಇಂಗ್ಲಿಷ್ ಸೇರಿದಂತೆ ಒಟ್ಟು 11 ವಿಷಯಗಳನ್ನು ಒಳಗೊಂಡಿದೆ. ಪ್ರತಿಯೊಂದು ಕೋರ್ಸ್ 21 ವಾರಗಳವರೆಗೆ ವಿನ್ಯಾಸಗೊಳಿಸಲಾಗಿದ್ದು, ವಿದ್ಯಾರ್ಥಿಗಳು ಒತ್ತಡವಿಲ್ಲದೆ ತಮ್ಮದೇ ಆದ ವೇಗದಲ್ಲಿ ಅಧ್ಯಯನ ಮಾಡಲು ಅನುವು ಮಾಡಿಕೊಡುತ್ತದೆ.

ಅಧ್ಯಯನ ವಿಧಾನ ಮತ್ತು ಸೌಲಭ್ಯಗಳು

ಈ ಆನ್‌ಲೈನ್ ಕೋರ್ಸ್‌ಗಳು ವೀಡಿಯೊ ಉಪನ್ಯಾಸಗಳು, ಚರ್ಚಾ ವೇದಿಕೆಗಳು ಮತ್ತು ತಜ್ಞರ ಮಾರ್ಗದರ್ಶನದಂತಹ ವೈಶಿಷ್ಟ್ಯಗಳನ್ನು ನೀಡುತ್ತವೆ. ವಿದ್ಯಾರ್ಥಿಗಳು ತಮ್ಮ ಸಿದ್ಧತೆಯನ್ನು ಪರೀಕ್ಷಿಸಲು ರಸಪ್ರಶ್ನೆಗಳು ಮತ್ತು ಪರೀಕ್ಷೆಗಳನ್ನು ಸಹ ತೆಗೆದುಕೊಳ್ಳಬಹುದಾಗಿದೆ. ಕೋರ್ಸ್ ಪೂರ್ಣಗೊಳಿಸಿದ ನಂತರ, ಅಭ್ಯರ್ಥಿಗಳು ಅಂತಿಮ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಪರೀಕ್ಷೆಯ ತೇರ್ಗಡೆಯಿಂದ ಪ್ರಮಾಣಪತ್ರ ದೊರೆಯುವುದು.



ಉಪಕ್ರಮದ ಪ್ರಮುಖ ಪ್ರಯೋಜನ

ಈ ಉಪಕ್ರಮದ ಬಹುದೊಡ್ಡ ಪ್ರಯೋಜನವೆಂದರೆ ಅದರ ನಮ್ಯತೆ. ವಿದ್ಯಾರ್ಥಿಗಳು ಹಗಲು ಅಥವಾ ರಾತ್ರಿ ಯಾವುದೇ ಸಮಯದಲ್ಲಿ ಮತ್ತು ಎಲ್ಲಿಂದಲಾದರೂ ಅಧ್ಯಯನ ಮಾಡಬಹುದು. ಇದು ಅವರ ನಿಯಮಿತ ಅಧ್ಯಯನದ ಜೊತೆಗೆ ಹೆಚ್ಚುವರಿ ಅಭ್ಯಾಸವನ್ನು ಪಡೆಯಲು ಸಹಾಯ ಮಾಡುತ್ತದೆ.

ಅರ್ಜಿ ಸಲ್ಲಿಕೆ ಯಾವಾಗ?

ವಿದ್ಯಾರ್ಥಿಗಳು ಈ ಕೋರ್ಸ್‌ಗಳಿಗೆ ಸೆಪ್ಟೆಂಬರ್ 1ರೊಳಗೆ ನೋಂದಾಯಿಸಿಕೊಳ್ಳಬೇಕು. ಮೌಲ್ಯಮಾಪನಕ್ಕಾಗಿ ಅರ್ಜಿಗಳನ್ನು ಸೆಪ್ಟೆಂಬರ್ 7 ಮತ್ತು 9ರ ನಡುವೆ ಸ್ವೀಕರಿಸಲಾಗುತ್ತದೆ. ಅಂತಿಮ ಪರೀಕ್ಷೆಗಳು ಸೆಪ್ಟೆಂಬರ್ 10 ರಿಂದ 15ರವರೆಗೆ ನಡೆಯಲಿದ್ದು, ಕೋರ್ಸ್ ಸೆಪ್ಟೆಂಬರ್ 15ರಂದು ಮುಕ್ತಾಯಗೊಳ್ಳುತ್ತದೆ.

ಎನ್‌ಸಿಇಆರ್‌ಟಿ ಕೈಗೊಂಡಿರುವ ಈ ಹೊಸ ಉಪಕ್ರಮಗಳು ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳನ್ನು ತರಲಿವೆ. 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಸುಲಭ, ಸಮಗ್ರ ಹಾಗೂ ಭವಿಷ್ಯಮುಖಿ ಶಿಕ್ಷಣವನ್ನು ಒದಗಿಸುವತ್ತ ಇದು ದೊಡ್ಡ ಹೆಜ್ಜೆಯಾಗಿದೆ.

ಅರ್ಜಿ ಸಲ್ಲಿಸುವುದು ಹೇಗೆ?

- SWAYAM ಪೋರ್ಟಲ್‌ಗೆ ಭೇಟಿ ನೀಡುವ ಮೂಲಕ ನೋಂದಾಯಿಸಿ.
- ನಿಮ್ಮ ಆಯ್ಕೆಯ ಕೋರ್ಸ್ ಅನ್ನು ಆರಿಸಿ.
- ದಾಖಲಾತಿಯನ್ನು ಪೂರ್ಣಗೊಳಿಸಿದ ನಂತರ ಅಧ್ಯಯನ ಸಾಮಗ್ರಿಗಳನ್ನು ಪರಿಶಿಲಿಸಿರಿ.
- ಎಲ್ಲ ಕಾರ್ಯಯೋಜನೆಗಳು ಮತ್ತು ಚಟುವಟಿಕೆಗಳನ್ನು ಪೂರ್ಣಗೊಳಿಸಿ.
- ಪ್ರಮಾಣಪತ್ರ ಪಡೆದುಕೊಳ್ಳಲು ಅಂತಿಮ ಪರೀಕ್ಷೆಗೆ ಹಾಜರಾಗಿ.
- ವಿದ್ಯಾರ್ಥಿಗಳು ಬಯಸಿದರೆ, ಅವರು NCERT ಯ ಅಧಿಕೃತ ವೆಬ್‌ಸೈಟ್ ಮೂಲಕವೂ ಅಂತಿಮ ದಿನಾಂಕದೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ವಿದ್ಯಾರ್ಥಿಗಳಿಗೆ ಲಾಭಗಳು

- ಎನ್‌ಸಿಇಆರ್‌ಟಿ ಹೊಸ ಉಪಕ್ರಮಗಳಿಂದ ವಿದ್ಯಾರ್ಥಿಗಳಿಗೆ ಹಲವಾರು ಪ್ರಯೋಜನಗಳಿವೆ.
- ಎಲ್ಲೆಂದರಲ್ಲಿ, ಯಾವಾಗ ಬೇಕಾದರೂ ಕಲಿಕೆ
- ಉಚಿತ ಮತ್ತು ಗುಣಮಟ್ಟದ ಶಿಕ್ಷಣ
- ಪರೀಕ್ಷಾ ಸಿದ್ಧತೆಗೆ ಉತ್ತಮ ಸಹಾಯ
- ಭವಿಷ್ಯದ ಉದ್ಯೋಗಗಳಿಗೆ ಸಿದ್ಧತೆ

ರಾಜ್ಯದಲ್ಲಿ ಸುಗಮವಾಗಿ ನಡೆದ 'ನೀಟ್' ಪರೀಕ್ಷೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯು (ನೀಟ್) ಮೇ. 3ರಂದು ಸುಗಮವಾಗಿ ನಡೆಯಿತು. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಆಯೋಜಿಸಿದ್ದ ನೀಟ್ ಪರೀಕ್ಷೆಗೆ ರಾಜ್ಯದಲ್ಲಿ ಸುಮಾರು 1.45 ಲಕ್ಷ ವಿದ್ಯಾರ್ಥಿಗಳು ಹಾಜರಾದರು.

ಇಬ್ಬರು ವಿದ್ಯಾರ್ಥಿನಿಯರು ನಗರದಲ್ಲಿನ ಪರೀಕ್ಷಾ ಕೇಂದ್ರಕ್ಕೆ ತಡವಾಗಿ ಬಂದಿದ್ದರಿಂದ ಪರೀಕ್ಷೆ ಬರೆಯಲು ಅವಕಾಶ ಸಿಗಲಿಲ್ಲ. ಮಧ್ಯಾಹ್ನ 2 ಗಂಟೆಗೆ ಪರೀಕ್ಷೆ ಆರಂಭವಾಯಿತು. 1.30ರ ಒಳಗೆ ಪರೀಕ್ಷಾ ಕೇಂದ್ರದಲ್ಲಿ ಇರಬೇಕು ಎಂದು ಸೂಚಿಸಲಾಗಿತ್ತು. ಆದರೆ, ಸಂಚಾರ ದಟ್ಟಣೆಯಿಂದಾಗಿ ವಿದ್ಯಾರ್ಥಿನಿಯೊಬ್ಬರು 20 ನಿಮಿಷ ತಡವಾಗಿ ಪರೀಕ್ಷಾ ಕೇಂದ್ರಕ್ಕೆ ಬಂದರು. ಇದರಿಂದಾಗಿ ಆರ್.ಸಿ.ಕಾಲೇಜಿನ ಪರೀಕ್ಷಾ ಕೇಂದ್ರದ ಸಿಬ್ಬಂದಿ ಒಳಗೆ ಬಿಡಲಿಲ್ಲ. ಪರೀಕ್ಷೆ ಬರೆಯಲು ಅವಕಾಶ ಸಿಗದ ಕಾರಣ ವಿದ್ಯಾರ್ಥಿನಿ ಕಣ್ಣೀರು ಹಾಕಿದಳು.

ಅಭ್ಯರ್ಥಿಗಳ ಬೆವರಿಳಿಸಿದ ಹೇಳಿಕೆ ಆಧಾರಿತ ಪ್ರಶ್ನೆಗಳು

ಈ ಬಾರಿ ಪ್ರಶ್ನೆ ಪತ್ರಿಕೆಯಲ್ಲಿದ್ದ ಸುದೀರ್ಘವಾದ 'ಹೇಳಿಕೆ ಆಧಾರಿತ' ಪ್ರಶ್ನೆಗಳು ಅಭ್ಯರ್ಥಿಗಳ ಬೆವರಿಸುವಂತೆ ಮಾಡಿದೆ. ಈ ಸ್ಪರ್ಧಾತ್ಮಕ ಪರೀಕ್ಷೆಯು ಒಟ್ಟು 720 ಅಂಕಗಳಿಗೆ ನಡೆದಿದ್ದು, ಬಹುತೇಕ ಪ್ರಶ್ನೆಗಳು ಎನ್‌ಸಿಇಆರ್‌ಟಿ ಪಠ್ಯಕ್ರಮಕ್ಕೆ ಅನುಗುಣವಾಗಿಯೇ ಇತ್ತು. ಆದರೆ, ಪ್ರಶ್ನೆಗಳ ಸ್ವರೂಪವು ಸಮಯ ನಿರ್ವಹಣೆಗೆ ಅಡ್ಡಿಯುಂಟುಮಾಡಿದೆ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

ಸಮಯ ಕಿತ್ತುಕೊಂಡ 'ಸ್ಟೇಟ್‌ಮೆಂಟ್' ಪ್ರಶ್ನೆಗಳು

ಈ ವರ್ಷದ ಪರೀಕ್ಷೆಯಲ್ಲಿ ನೇರ ಪ್ರಶ್ನೆಗಳಿಗಿಂತ ಹೆಚ್ಚಾಗಿ 'ಹೇಳಿಕೆ ಆಧಾರಿತ' (ಸ್ಟೇಟ್‌ಮೆಂಟ್), 'ಸರಿ–ತಪ್ಪು ಪತ್ತೆಹಚ್ಚುವಿಕೆ' ಮತ್ತು 'ಹೊಂದಿಸಿ ಬರೆಯಿರಿ' ಮಾದರಿಯ ಪ್ರಶ್ನೆಗಳು ಅತಿ ಹೆಚ್ಚಾಗಿದ್ದವು. ಜೀವಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಭಾಗದಲ್ಲಿ ಪ್ರತಿಯೊಂದು ಆಯ್ಕೆಯನ್ನು ಕೂಲಂಕಷವಾಗಿ ಓದಿ ಅರ್ಥೈಸಿಕೊಳ್ಳಲು ಹೆಚ್ಚಿನ ಸಮಯ ವ್ಯಯವಾಗಿದ್ದರಿಂದ, ಭೌತಶಾಸ್ತ್ರದ ಲೆಕ್ಕಾಚಾರಗಳನ್ನು ಪೂರ್ಣಗೊಳಿಸಲು ವಿದ್ಯಾರ್ಥಿಗಳು ಪರದಾಡುವಂತಾಯಿತು.

ಒಟ್ಟಾರೆಯಾಗಿ, ಈ ಬಾರಿಯ ಕಟ್–ಆಫ್ ಅಂಕಗಳು ಕಳೆದ ವರ್ಷಕ್ಕಿಂತ ಹೆಚ್ಚಾಗುವ ಸಾಧ್ಯತೆಯಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಪರೀಕ್ಷೆ ಬರೆದ ಬಹುತೇಕರು ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದ್ದಾರೆ.

UGC NET ಪರೀಕ್ಷೆಗೆ ಅರ್ಜಿ ಸಲ್ಲಿಕೆ ಪ್ರಾರಂಭ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) 2026ರ ಯುಜಿಸಿ ನೆಟ್ ಜೂನ್ ಅವಧಿಯ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭಿಸಿದೆ. ಇದು ದೇಶಾದ್ಯಂತದ ಅಭ್ಯರ್ಥಿಗಳಿಗೆ ಉನ್ನತ ಶಿಕ್ಷಣ ಮತ್ತು ಬೋಧನಾ ಕ್ಷೇತ್ರದಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ಅವಕಾಶವನ್ನು ಒದಗಿಸುತ್ತದೆ.

ಈ ಪರೀಕ್ಷೆಯು ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್), ಸಹಾಯಕ ಪ್ರಾಧ್ಯಾಪಕರು ಮತ್ತು ಪಿಎಚ್‌ಡಿ ಪ್ರವೇಶಗಳಿಗೆ ಅರ್ಹತೆಯನ್ನು ನಿರ್ಧರಿಸುತ್ತದೆ. ಆಸಕ್ತ ಅಭ್ಯರ್ಥಿಗಳು ಮೇ 20ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಪರೀಕ್ಷೆಯು ಜೂನ್ 22 ಮತ್ತು 30ರ ನಡುವೆ ನಡೆಯಲಿದೆ. ಪರೀಕ್ಷಾ ನಗರದ ಮಾಹಿತಿಯನ್ನು ಜೂನ್ 10 ರೊಳಗೆ ಬಿಡುಗಡೆ ಮಾಡಲಾಗುವುದು ಮತ್ತು ಪ್ರವೇಶ ಪತ್ರಗಳು ಜೂನ್ 15 ರೊಳಗೆ ಲಭ್ಯವಾಗಲಿವೆ ಎನ್ನಲಾಗಿದೆ. ಆದ್ದರಿಂದ, ಅಭ್ಯರ್ಥಿಗಳು ಗಡುವಿನೊಳಗೆ ಅರ್ಜಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.

ಹತ್ತರ ನಂತರ ಹತ್ತಲು ಹಲವು ಶೈಕ್ಷಣಿಕ ಹಾದಿಗಳು

10ನೇ ತರಗತಿ ನಂತರ ಮುಂದೇನು? ದಾರಿ ಯಾವುದಯ್ಯ? ಎಂದು ಪೋಷಕರು ಅಥವಾ ಮಕ್ಕಳು ಆಲೋಚನೆ ಮಾಡಿದಾಗ ತಕ್ಷಣ ಹೊಳೆಯುವುದು 'ಪಿಯುಸಿ' ಅಧ್ಯಯನ ಮಾಡುವುದು. ಬಹುತೇಕ ಮಕ್ಕಳು ಇದನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಶೈಕ್ಷಣಿಕ ಬದುಕಿನಲ್ಲಿ ದೂರ ಕ್ರಮಿಸಬೇಕು ಎಂದು ದೂರಾಲೋಚನೆ ಇರುವವರಿಗೆ ಇದು ಸೂಕ್ತ ಆಯ್ಕೆಯಾಗಿದೆ.

ಪಿಯುಸಿಯಲ್ಲಿ ವಿಜ್ಞಾನ, ಕಲೆ, ವಾಣಿಜ್ಯ ಎಂಬ ಮೂರು ವಿಭಾಗಗಳಿವೆ. ಸಾಮರ್ಥ್ಯ ಆಸಕ್ತಿಗೆ ಅನುಸಾರ ಕೋರ್ಸ್ ಆಯ್ಕೆ ಮಾಡಿಕೊಳ್ಳಬಹುದು. ಪ್ರತಿ ವಿಭಾಗದಲ್ಲಿ ವಿಷಯಗಳ ಆಯ್ಕೆಗೆ ಅವಕಾಶವಿದೆ. ಕಾಲೇಜು ಕ್ಯಾಂಪಸ್, ನುರಿತ ಉಪನ್ಯಾಸಕರು, ಬೋಧನೆ ಗುಣಮಟ್ಟ, ಮೂಲಭೂತ ಸೌಲಭ್ಯಗಳ ಲಭ್ಯತೆ ಆಧರಿಸಿ ಯಾವ ಕಾಲೇಜು ಸೇರಬೇಕು ಎಂದು ನಿರ್ಧರಿಸಬಹುದು. ಊರು ಅಥವಾ ಮನೆಯಿಂದ ದೂರ, ಹಾಸ್ಟೆಲ್ ವ್ಯವಸ್ಥೆ, ಮನೆಯ ಆರ್ಥಿಕ ಸಾಮರ್ಥ್ಯ, ಪೋಷಕರ ಪ್ರೋತ್ಸಾಹ ಬೆಂಬಲ ಗಮನದಲ್ಲಿ ಇಟ್ಟುಕೊಂಡು, ಅನುಕೂಲವಾಗುವ ಕಾಲೇಜು ಆಯ್ಕೆ ಮಾಡಿಕೊಳ್ಳಬೇಕು.

ಶೈಕ್ಷಣಿಕ ದಾರಿದೀಪ

ಪ್ರಹ್ಲಾದ ವಾ ಪತ್ತಾರ
ಬೆಂಗಳೂರು

ವಾಣಿಜ್ಯ ವಿಭಾಗ

ಇಂದು ಜಗತ್ತು ಆಳುತ್ತಿರುವುದು ತಂತ್ರಜ್ಞಾನ ಆಧರಿತ ಸೇವಾ ವಲಯವಾಗಿದೆ. ಮನುಷ್ಯನ ಬದುಕಿನ ಮೂಲಭೂತ ಅಗತ್ಯತೆಗಳು, ಕಂಪನಿಯ ಉತ್ಪಾದನೆ, ಮನರಂಜನೆ, ಬ್ಯಾಂಕಿಂಗ್, ಸಾರಿಗೆ ಸಂಪರ್ಕ, ಈ ಎಲ್ಲ ಆರ್ಥಿಕ ವಾಣಿಜ್ಯ ವ್ಯಾಪಾರದ ಚಟುವಟಿಕೆಗಳನ್ನು ಕಾಮರ್ಸ್ ವಿಭಾಗ ನಿಯಂತ್ರಿಸುತ್ತದೆ. ಸೇವಾವಲಯದಲ್ಲಿ ಕೆಲಸ ಮಾಡುವ ಆಸಕ್ತಿ ಇರುವಂತವರಿಗೆ ಈ ಕೋರ್ಸ್ ಬಹಳ ಉಪಯುಕ್ತ.

ಸಾಮಾನ್ಯವಾಗಿ ಲೆಕ್ಕಪತ್ರ, ವಾಣಿಜ್ಯ, ಸಂಖ್ಯಾಶಾಸ್ತ್ರ, ಕಂಪ್ಯೂಟರ್ ಅಧ್ಯಯನ, ವ್ಯವಹಾರ ಅಧ್ಯಯನ, ಅರ್ಥಶಾಸ್ತ್ರ, ಸಾಮಾನ್ಯ ಗಣಿತ, ಭೂಗೋಳ, ಇತಿಹಾಸ ಇವುಗಳಲ್ಲಿ ನಾಲ್ಕು ವಿಷಯಗಳ ಸಂಯೋಜನೆಯನ್ನು 'ಕೋರ್' ವಿಷಯಗಳಾಗಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಜೊತೆಗೆ ಎರಡು ಭಾಷಾ ವಿಷಯಗಳ ಅಧ್ಯಯನವೂ ಕಡ್ಡಾಯವಾಗಿ ಮಾಡಬೇಕು.

ವಾಣಿಜ್ಯ ವಿಭಾಗದಲ್ಲಿ ಅಧ್ಯಯನ ಮಾಡುವವರು ಆಂಗ್ಲ ಮಾಧ್ಯಮದಲ್ಲಿ ಓದಿದಾಗ, ಬಹಳಷ್ಟು ಅವಕಾಶಗಳು ಸಿಗುತ್ತವೆ. ಕಾಮರ್ಸ್ ಓದುವುದರ ಜೊತೆಗೆ ಪೂರಕ ಕ್ರ್ಯಾಷ್ ಕೋರ್ಸ್, ಸರ್ಟಿಫಿಕೇಟ್ ತರಬೇತಿ ಪಡೆದು ತಕ್ಷಣವೇ ಉದ್ಯೋಗದಲ್ಲಿ ತೊಡಗಬಹುದು.

ಪಿಯುಸಿ ಹಂತದಲ್ಲಿ ಇರುವ ಮೂರು ವಿಭಾಗಗಳು

ವಿಜ್ಞಾನ ವಿಭಾಗ

ಭವಿಷ್ಯದಲ್ಲಿ ಉಜ್ವಲ ಬದುಕು ಕಟ್ಟಿಕೊಳ್ಳಲು ವಿಪುಲ ಅವಕಾಶಗಳು ಇರುವ ಕಾರಣ ಈ ವಿಜ್ಞಾನ ವಿಭಾಗ ಆಯ್ಕೆ ಮಾಡಿಕೊಳ್ಳಬೇಕು ಎಂಬ ಸಾಮಾನ್ಯ ವಾಡಿಕೆ ಇದೆ. ಕರಾರುವಕ್ಕಾದ ವೈಜ್ಞಾನಿಕ ವಿಷಯಗಳು ಇಲ್ಲಿವೆ. ತಂತ್ರಜ್ಞಾನ ವೈದ್ಯಕೀಯ ಕ್ಷೇತ್ರದಲ್ಲಿ ಮುಂದುವರಿಯಬೇಕು

ಎಂಬ ಹಂಬಲ ಇರುವವರು ವಿಜ್ಞಾನ ವಿಭಾಗದಲ್ಲೇ ಓದಬೇಕು. ಅಪಾರ ಬುದ್ಧಿಶಕ್ತಿ, ತಾಳ್ಮೆ, ಪ್ರಾಯೋಗಿಕ ಜ್ಞಾನ, ಚಿಂತನೆ, ಆಸಕ್ತಿ ಇರುವವರು ವಿಜ್ಞಾನ ವಿಷಯ ಆಯ್ಕೆ ಮಾಡಿಕೊಳ್ಳುವುದು ಉಚಿತ. ಹೆಚ್ಚಿನ ಪ್ರಾಯೋಗಿಕ ತರಬೇತಿಗಳು ಇದ್ದು, ಹೆಚ್ಚಿನ ಸಮಯ ಕಾಲೇಜಿನಲ್ಲೇ ಕಳೆಯಬೇಕು. ಓದಿನ ಜೊತೆ ಬೇರೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಕಷ್ಟಸಾಧ್ಯ. ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಬೇಕು. ಪಿಯು ಬೋರ್ಡ್ ನಿಗದಿಪಡಿಸಿದ ನಾಲ್ಕು ಕೊರ್ ವಿಷಯಗಳ ಒಂದು ಕಾಂಬಿನೆಶನ್ ಹಾಗೂ ಎರಡು ಭಾಷೆಗಳು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬೇಕು.

ಭೌತಶಾಸ್ತ್ರ, ರಾಸಾಯನ ಶಾಸ್ತ್ರ, ಜೀವಶಾಸ್ತ್ರ, ಗಣಿತ, ಕಂಪ್ಯೂಟರ್, ಎಲೇಟ್ರಾನಿಕ್ಸ್, ಮನೋವಿಜ್ಞಾನ, ಸಂಖ್ಯಾಶಾಸ್ತ್ರ, ಗೃಹವಿಜ್ಞಾನ, ಎಂಬ ಪ್ರಧಾನ ವಿಷಯಗಳು ಪಿಯು ಬೋರ್ಡ್ ನಿಗದಿಪಡಿಸಿದೆ. ಇವುಗಳಲ್ಲಿ ನಾಲ್ಕು ವಿಷಯ ಆಯ್ಕೆ ಮಾಡಿಕೊಳ್ಳಬೇಕು. ಕನ್ನಡ, ಹಿಂದಿ, ಇಂಗ್ಲಿಷ್, ಉರ್ದು, ಮರಾಠಿ, ತಮಿಳು, ತೆಲಗು ಭಾಷೆಗಳಲ್ಲಿ ಎರಡು ಭಾಷೆ ಆಯ್ಕೆ ಮಾಡಿಕೊಳ್ಳಬೇಕು. ಪಿಯುಸಿ ನಂತರ ವೃತ್ತಿಪರ ಕೊರ್ಸ್‌ಗಳು ಸೇರಲು ಸ್ಪರ್ಧಾತ್ಮಕ ಪರೀಕ್ಷೆಗಳು ಎದುರಿಸಬೇಕು. ಉತ್ತಮ ರ್‍ಯಾಂಕ್ ಗಳಿಸಿದವರಿಗೆ ಇಚ್ಛಿತ ಕೋರ್ಸ್‌ಗಳಲ್ಲಿ ಕಲಿಯಬಹುದು.

ಕಲಾ ವಿಭಾಗ

ಮಾನವನ ಜೀವನಕ್ರಮದ ಸುತ್ತಲೂ ಹುಟ್ಟಿನಿಂದ ಹಿಡಿದು ಸಾವಿನವರೆಗೂ ಹಾಗೂ ಸಾವಿನ ಆಚೆಯ ಬದುಕಿನ ಬಗ್ಗೆ ಸಾಕಷ್ಟು ಚಿಂತನೆ ಚರ್ಚೆ ತರ್ಕ ಮಾಡುತ್ತೇವೆ. ಕಲಾ ವಿಭಾಗದಲ್ಲಿ ಮಾನವಿಕ ಈ ವಿಷಯಗಳು ಅಧ್ಯಯನ ಮಾಡಬಹುದಾಗಿದೆ. ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಂಗೀತ, ಚಿತ್ರಕಲೆ, ನೃತ್ಯ, ಕಾನೂನು, ಅಭಿವೃದ್ಧಿ, ಅಭಿನಯ, ಧರ್ಮ, ಜಾನಪದ, ಸಾಹಿತ್ಯ, ರಾಜಕೀಯ ಸಾಮಾಜಿಕ ವ್ಯವಸ್ಥೆ, ಇತ್ಯಾದಿ ಮಾನವ ಕೇಂದ್ರೀಕೃತ ವಿಷಯಗಳನ್ನು ಕ್ರಮಬದ್ಧವಾಗಿ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಕ್ಷೇತ್ರವೇ ಕಲಾ ವಿಭಾಗವಾಗಿದೆ.

ಕಲಾತ್ಮಕ ಮತ್ತು ಮಾನವಿಕ ವಿಷಯಗಳಲ್ಲಿ ಹೆಚ್ಚು ಆಸಕ್ತಿ ಪ್ರತಿಭೆ, ನಾಯಕತ್ವ, ಆಡಳಿತ ನಿರ್ವಹಣೆಯ ಚಾಣಾಕ್ಷತನ ಇರುವ ಮಕ್ಕಳು ಈ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಬಹುದು.

ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಶಿಕ್ಷಣ, ಗೃಹವಿಜ್ಞಾನ, ಮನೋವಿಜ್ಞಾನ, ತತ್ವಶಾಸ್ತ್ರ ಐಚ್ಛಿತ ಕನ್ನಡ, ಕರ್ನಾಟಕ ಹಿಂದುಸ್ತಾನಿ ಸಂಗೀತ, ಮುಂತಾದ ವಿಷಯಗಳನ್ನು 'ಕೋರ್' ವಿಷಯಗಳನ್ನಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಇವುಗಳ ಜತೆ ಎರಡು ಭಾಷಾ ವಿಷಯಗಳ ಅಧ್ಯಯನ ಮಾಡಬೇಕು.

ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಓದಲು ಅವಕಾಶವಿದೆ. ಆಂಗ್ಲ ಮಾಧ್ಯಮದಲ್ಲಿ ಓದಿದವರಿಗೆ ಇಂದು ಹೆಚ್ಚಿನ ಸ್ಕೋಪ್ ಇದೆ. ಜೊತೆಗೆ ರಾಷ್ಟ್ರಮಟ್ಟದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಸಹಕಾರಿಯಾಗುವುದು. ಹೆಚ್ಚಿನ ಉನ್ನತ ವ್ಯಾಸಂಗ ಮುಂದುವರಿಸಬಹುದು. ಕಲಾ ವಿಭಾಗದಲ್ಲಿ ಉದ್ಯೋಗ ಅವಕಾಶಗಳು ಕಡಿಮೆ ಇದ್ದಾಗ್ಯೂ ಸಾಮರ್ಥ್ಯ ಪ್ರತಿಭೆ ಕೌಶಲ್ಯ ಮೂಲಕ ಉತ್ತಮ ಕೆರಿಯರ್ ರೂಪಿಸಿಕೊಳ್ಳಬಹುದು.



ಪಿಯುಸಿ ಎನ್ನುವುದು ಪದವಿ ಶಿಕ್ಷಣ ಆರಂಭಿಸಲು ಇರುವ ಮೊದಲ ಮೆಟ್ಟಿಲಾಗಿದೆ. ಇಲ್ಲಿ ಗಳಿಸುವ ಸಾಮರ್ಥ್ಯ ತೊಡಗಿಸಿಕೊಳ್ಳುವ ಆಸಕ್ತಿ, ಭವಿಷ್ಯದ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿ ಕೊಡುವುದು. ಶಿಕ್ಷಣ ಸಾಕು ಎಂದು ಉದ್ಯೋಗ ಅರಸಿದರೆ, ಪಿಯು ವಿದ್ಯಾರ್ಹತೆಯ ಮೆರಿಟ್ ಆಧರಿಸಿ ರಾಜ್ಯ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇರ ನೇಮಕಾತಿ ಹೊಂದಬಹುದು. ಖಾಸಗಿ ಕಂಪನಿಯಲ್ಲಿ ಉದ್ಯೋಗ ಅರಸಬಹುದು. ಸ್ವಯಂ ಉದ್ಯೋಗಗಳನ್ನು ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ಈ ವೆಬ್ ಸೈಟ್ ವೀಕ್ಷಣೆ ಮಾಡಿರಿ. www.pue.kar.nic.in ಅಥವಾ www.karnatakaeducation.gov.in

ಶ್....! ನಮ್ಮನೆ ಫ್ರಿಡ್ಜ್ ಸದ್ದು ಮಾಡುತಿದೆ..

ಕುಸುಮ ಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆಯುತ್ತಿರುವ ಹುಡುಗಿ. ಮನೆಯಲ್ಲಿ ತರಹ ತರಹ ಐಶಾರಾಮಿ ವಸ್ತುಗಳು ಇರದೇ ಹೋದರೂ ಖುಷಿಯಾಗಿ ಜೀವನ ಕಳೆಯುವ ಸಂಸಾರ ಅವರದು. ಕೀರ್ತನಾ ಅವಳ ಗೆಳತಿ. ಇಬ್ಬರ ಮನೆಗಳು ಅಕ್ಕಪಕ್ಕದಲ್ಲಿಯೇ ಇವೆ. ಕೀರ್ತನಾ ಶ್ರೀಮಂತ ಕುಟುಂಬದ ಹುಡುಗಿ. ಮನೆಯಲ್ಲಿ ಯಾವುದಕ್ಕೂ ಏನೂ ಕೊರತೆ ಇರಲಿಲ್ಲ. ಬೇಸಿಗೆ ಕಾಲ ಬಂತೆಂದರೆ ಸಾಕು, ಅವರ ಮನೆಯಲ್ಲಿ ತಂಪು ತಂಪು ನೀರು, ಐಸ್ ಕ್ರೀಮ್, ಕೋಲ್ಡ್ ಡ್ರಿಂಕ್ಸ್, ಶರಬತ್ತು..... ಇವುಗಳದೇ ಹವಾ. ಕೀರ್ತನಾ ಕುಸುಮಾಳ ಜೊತೆ ಎಲ್ಲವನ್ನು ಶೇರ್ ಮಾಡಿಕೊಂಡು ತಿನ್ನುತ್ತಿದ್ದಳು ಕುಡಿಯುತ್ತಿದ್ದಳು. ಅದನ್ನೆಲ್ಲ ನೋಡಿದ ಕುಸುಮಾಳಿಗೆ ಮನಸಲ್ಲಿ ಒಂದು ಸಣ್ಣ ಆಸೆ ಚಿಗುರಿತು. ನಮ್ಮ ಮನೆಯಲ್ಲಿಯೂ ಒಂದು ಫ್ರಿಡ್ಜ್ ಇದ್ದಿದ್ದರೆ ಎಷ್ಟು ಚೆಂದ ಇರುತ್ತಿತ್ತು ಅಲ್ವಾ? ಎಂದು ಯೋಚಿಸಿ, ನೇರವಾಗಿ ಅಪ್ಪನ ಹತ್ತಿರ ಬಂದು ಅಪ್ಪ.... ಅಪ್ಪ..... ನಮ್ಮ ಮನೆಗೂ ಒಂದು ಫ್ರಿಡ್ಜ್ ತೆಗೆದುಕೊಂಡು ಬಾ ಅಪ್ಪ, ಅಂದರೆ ನಾವೂ ದಿನಾಲು ತಣ್ಣನೆಯ ನೀರು ಕುಡಿಯಬಹುದು ಎಂದಳು. ಆಯ್ತು ಮಗಳೇ.... ತರ್ತೀನಿ ಅಂದ್ರು ಅವಳ ಅಪ್ಪ.

ಮಾರನೆಯ ದಿನ ಅಪ್ಪ ಮಾರುಕಟ್ಟೆಯಿಂದ ಬರುವುದನ್ನು ಮನೆಯ ಬಾಗಿಲ ಮುಂದೆಯೇ ಕುಳಿತು ಕಾಯುತ್ತಿದ್ದಳು ಕುಸುಮ. ನಮ್ಮ ಅಪ್ಪ ಇವತ್ತು ಫ್ರಿಡ್ಜ್ ತರ್ತಾರೆ ಅಂತ ತನ್ನ ಗೆಳತಿಯರ ಮುಂದೆಲ್ಲಾ ಹೇಳಿಕೊಂಡು ಬಂದಿದ್ದಳು. ಅಪ್ಪ ಬಂದರು. ಆದರೆ ಕೈಯಲ್ಲಿ ಒಂದು ಮಣ್ಣಿನ ಮಡಿಕೆ ಇತ್ತು. ಅಪ್ಪ.... ಫ್ರಿಡ್ಜ್ ಎಲ್ಲಿ? ಎಂದಳು. ಇದೇ ಮಗಳೇ.... ಬಡವರ ಮನೆಯ ಫ್ರಿಡ್ಜ್. ಸ್ವಲ್ಪ ದುಡ್ಡಲ್ಲೇ ಕೊಂಡುಕೊಳ್ಳಬಹುದು ಎಂದು ಏನೋ ಒಂದು ಹೇಳಿ ಅವಳನ್ನು ಸಮಾಧಾನ ಪಡಿಸಿದರು. ಕುಸುಮ ಮಡಿಕೆಯನ್ನು ತೆಗೆದುಕೊಂಡು ಒಳಗೆ ಹೋಗಿ ಎರಡು ಮೂರು ಸಲ ನೀರಿನಿಂದ ಸ್ವಚ್ಛವಾಗಿ ತೊಳೆದು, ಒಂದು ಕೊಡ ನೀರು ಸುರಿದು ಇಟ್ಟಳು. ಮಡಿಕೆ ಸುಯ್ಯ್ ಅಂತ ಸಣ್ಣದಾಗಿ ಸದ್ದು ಮಾಡುತಿತ್ತು. ಎರಡು–ಮೂರು ಗಂಟೆಗಳ ಕಾಲ ಬಿಟ್ಟು, ಅದರಲ್ಲಿನ ನೀರು ಕುಡಿದಳು. ಅವಳಿಗೆ ಖುಷಿಯಾಯ್ತು. ಫ್ರಿಡ್ಜ್ ನೀರಿನಂತೆಯೇ ತಣ್ಣಗೆ ಇತ್ತು ಹಾಗೂ ರುಚಿ ಕೂಡ ಚೆನ್ನಾಗಿತ್ತು. ಅಪ್ಪ..... ಹೌದು ನೀವು ಹೇಳಿದ್ದು ನಿಜ. ಮಡಿಕೆಯ ನೀರು ತಣ್ಣಗೆ ಚೆನ್ನಾಗಿದೆ. ಮಡಿಕೆ ಫ್ರಿಡ್ಜ್ ಹಾಗೆಯೇ ಹೇಗೆ ಕೆಲಸ ಮಾಡುತ್ತದೆ ಅಪ್ಪ? ಎಂದು ಕೇಳಿದಳು. ಆಯ್ತು ಮಗಳೇ.... ಬಾ ಇಲ್ಲಿ ಹೇಳ್ತಿನಿ ಎಂದರು.

ಕಿಚನ್ ಲ್ಯಾಬೋರೇಟರಿ

ಭುವನೇಶ್ವರಿ ರು. ಅಂಗಡಿ
ಶಿಕ್ಷಕಿ, ಸರ್ಕಾರಿ ಪ್ರೌಢಶಾಲೆ ಕಲಹಾಳ, ಬೆಳಗಾವಿ

ಮಣ್ಣಿನ ಮಡಿಕೆ ಗ್ಲೇಝ್ ಮಾಡದ ಮಣ್ಣಿನಿಂದ ತಯಾರಾಗಿರುವುದರಿಂದ ಅದರಲ್ಲಿ ಸಣ್ಣ ರಂಧ್ರಗಳು ಇರುತ್ತವೆ. ಇವುಗಳಿಂದ ನೀರು ನಿಧಾನವಾಗಿ ಹೊರಗೆ ಸೋರಿಕೆ ಆಗುತ್ತದೆ. ಮಡಿಕೆಯ ಒಳಗಿನಿಂದ ಹೊರಗಿನ ಗಾಳಿಗೆ, ರಂಧ್ರಗಳ ಮೂಲಕ ನೀರು ಹರಿಯುವಾಗ ಅಥವಾ ಆವಿಯಾಗುವಾಗ ಸಣ್ಣದಾದ 'ಸುಯ್ಯ್' ಎನ್ನುವ ಶಬ್ದ ಉತ್ಪತ್ತಿಯಾಗುತ್ತದೆ. ಇದು ಮಡಿಕೆ ನೀರನ್ನು ತಂಪಾಗಿಸುತ್ತಿರುವ ಸಂಕೇತವಾಗಿದೆ. ಮಡಿಕೆಯು ಹೊಸದಾದಷ್ಟೂ ಈ ಶಬ್ದ ಮತ್ತು ನೀರು ತಂಪಾಗುವ ಕ್ರಿಯೆ ಹೆಚ್ಚಾಗಿರುತ್ತದೆ. ಹೊರಗಿನ ತಾಪಮಾನದಿಂದ ಕುಡಿಕೆಯ ಮೇಲ್ಮೈಯಲ್ಲಿ ಇರುವ ನೀರು ಆವಿಯಾಗುತ್ತದೆ. ನೀರು ಆವಿಯಾಗಲು ಬೇಕಾದ ಶಕ್ತಿಯನ್ನು ಕುಡಿಕೆಯೊಳಗಿನ ನೀರಿನಿಂದ ತೆಗೆದುಕೊಳ್ಳುತ್ತದೆ. ಇದರಿಂದ ಒಳಗಿನ ನೀರಿನ ತಾಪಮಾನ ಕಡಿಮೆಯಾಗಿ ನೀರು ತಂಪಾಗುತ್ತದೆ. ಈ ಪ್ರಕ್ರಿಯೆ ವಿಶೇಷವಾಗಿ ಬಿಸಿಲು(ಬೇಸಿಗೆ ದಿನಗಳಲ್ಲಿ) ಮತ್ತು ಒಣ ಹವಾಮಾನದಲ್ಲಿ ತುಂಬಾ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.

ಅಷ್ಟೇ ಅಲ್ಲ ಮಗಳೇ.... ಮಡಿಕೆಯ ನೀರಿನಲ್ಲಿ ಕ್ಯಾಲ್ಸಿಯಂ, ಮೆಗ್ನೇಶಿಯಂ ಮತ್ತು ಪೊಟ್ಯಾಷಿಯಂನಂತಹ ಅನೇಕ ಖನಿಜಗಳು ಇರುವುದರಿಂದ, ಮಡಿಕೆಯಲ್ಲಿ ಶೇಖರಿಸಿಟ್ಟ ನೀರನ್ನು ಕುಡಿಯುವುದರಿಂದ ನಮ್ಮ ಆರೋಗ್ಯ ಸುಧಾರಿಸುತ್ತದೆ. ನೀರಿನ ರುಚಿಯು ಕೂಡ ಬದಲಾಗಲ್ಲ. ಈಗ ಹೇಳು ಮಗಳೇ.... ನಿನಗೆ ಫ್ರಿಡ್ಜ್ ಬೇಕಾ? ಅಥವಾ ಮಡಿಕೆನೇ ಸಾಕಾ? ಅಂದ್ರು. ಅಪ್ಪ.... ನನಗೆ ಮಡಿಕೆನೇ ಸಾಕು ಅಪ್ಪ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಜೊತೆಗೆ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಅಲ್ವಾ? ಅಂದಳು ಕುಸುಮ.

ಮಕ್ಕಳೇ..... ಈ ಬೇಸಿಗೆಯಲ್ಲಿ ನೀವು ಕೂಡ ಮಡಿಕೆಯ ನೀರನ್ನು ಕುಡಿದು ಎಂಜಾಯ್ ಮಾಡಿ. ಮಡಿಕೆಯ ಸುತ್ತಲೂ ಬಟ್ಟೆ ಸುತ್ತಿದರೆ ನೀರು ಬಹುಬೇಗ ತಂಪಾಗುತ್ತದೆ.

Editor : Mahabaleshwar V.Bhat, Printed and Published by **Ashok Shanbhag** on behalf of Loka Shikshana Trust, Printed at Metropolitan Media Co.Ltd., No.284(Part), 285, 286, 287 Bykampady Industrial Area, Mangaluru-575 011 and Published at Samyukta Karnataka Press, No.2, Residency Road, Bengaluru-560 025. Phone No.0824/2426622, e-mail.skmglr@gmail.com, RNI Regn.No.3864/1959 **Executive Editor : Mohan Hegde**

ಅಪ್ಪನಂತಹ ಬಂಧು ಇಲ್ಲ ....!



'ಪ್ರಕಾಶ..ಬೇಗನೆ ಸ್ಕೂಲಿಗೆ ರೆಡಿಯಾಗು, ಊಟ ತಿಂಡಿ ಎಲ್ಲವನ್ನೂ ಅಮ್ಮ ರೆಡಿ ಮಾಡಿದ್ದಾಳೆ. ಇನ್ನೇನು ಬೇಗ ಸ್ನಾನ, ಉಪಹಾರ ಮಾಡಿ, ಸ್ಕೂಲ್ ಬ್ಯಾಗು ಹೆಗಲಲ್ಲಿ ಇಟ್ಟುಕೊಂಡು ಶಾಲೆಗೆ ಹೋಗುವುದಷ್ಟೇ ಬಾಕಿ ಇದೆ' ಎಂದು ಇನ್ನೂ ಹಾಸಿಗೆಯಲ್ಲೇ ಮಲಗಿಕೊಂಡಿದ್ದ ಪ್ರಕಾಶನಿಗೆ ಅಪ್ಪ ಹೇಳಿದನು. ತಟ್ಟನೆ ಹಾಸಿಗೆಯಿಂದ ಎದ್ದು ಕುಳಿತ ಪ್ರಕಾಶನು ಅಪ್ಪಾ.. 'ಅಮ್ಮಾ... ಎಷ್ಟು ಬೇಗ ಅಡುಗೆ ಮಾಡಿದ್ದಾಳಲ್ಲ..? ಮತ್ತು ನೀನೇಕೆ ಇಷ್ಟು ಬೇಗ ರೆಡಿ ಆದೆ.? ಎಂದು ಕೇಳುತ್ತಾನೆ. ಮಗು ಇಂದು ಮಾಲೂರಲ್ಲಿ ಮಾದೇಶನ ಜಾತ್ರೆ ಸಂಭ್ರಮವಿದೆ. ಪ್ರತಿವರ್ಷ ಅಲ್ಲಿ ಹೋಗಿ ಕಾಯಿ, ಕರ್ಪೂರ ದೀಪ ಹಚ್ಚಿ ಭಕ್ತಿ ಭಾವ ಸಲ್ಲಿಸಿಬರುತ್ತೇವೆ. ಅದಕ್ಕೆ ನೀನು ಬೇಗ ರೆಡಿ ಆಗಿ ಶಾಲೆಗೆ ಹೋಗು.ನಿನ್ನ ಶಾಲೆ ಬಿಡುವ ಹೊತ್ತಿಗಾಗಲೇ ನಾನು ಮರಳಿ ಬರುತ್ತೇನೆ' ಎಂದು ಪ್ರಕಾಶನ ಅಪ್ಪ ಹೇಳುತ್ತಿದ್ದಂತೆಯೇ ಪ್ರಕಾಶನಿಗೆ ದುಃಖ ಉಮ್ಮಳಿಸಿ ಬರುತ್ತದೆ. 'ಅಪ್ಪಾ ನಿನ್ನ ಜೊತೆ ನಾನೂ ಜಾತ್ರೆಗೆ ಬರುತ್ತೇನೆ, ನನಗೂ ಮಾದೇಶನ ಜಾತ್ರೆ ಸಂಭ್ರಮ ನೋಡುವ ಆಸೆ , ಇಂದೊಂದು ದಿನ ಶಾಲೆಗೆ ಗೈರುಹಾಜರ್ ಆದರೂ ಏನೂ ಆಗಲ್ಲಾ ' ಎಂದನು. ಆದರೆ ಪ್ರಕಾಶನ ತಂದೆ ತಾಯಿ ತುಂಬಾ ಬಡತನ ಕುಟುಂಬದಲ್ಲಿದ್ದವರು. ದೇವರಿಗೆ ಕಾಯಿ ಕರ್ಪೂರ ದೀಪ ಹಚ್ಚಿ ಭಕ್ತಿ ಭಾವ ಸಲ್ಲಿಸಿಬರುವಷ್ಟು ಮಾತ್ರ ದುಡ್ಡು ಇತ್ತು. ಪ್ರಕಾಶನು ತನ್ನ ಜೊತೆಯಲ್ಲಿ ಜಾತ್ರೆಗೆ ಬಂದರೆ, ಆತನು ಅಲ್ಲಿ ಕೇಳಿದ್ದನೆಲ್ಲ ಕೊಂಡು ಕೊಡುವಷ್ಟು ದುಡ್ಡು ಇರದ್ದರಿಂದ ಪ್ರಕಾಶನಿಗೆ ಜಾತ್ರೆಗೆ ಬರುವುದು ಬೇಡಾ' ಎಂದನು.

ಅಪ್ಪಾ.. ನಾನು ಜಾತ್ರೆಯಲ್ಲಿ ನಿನಗೆ ಏನೂ ಕೇಳುವುದಿಲ್ಲ.. ನೀನು ಏನು ಎಷ್ಟು ಕೊಡಿಸುತ್ತೀಯೋ, ಬಿಡುತ್ತೀಯೋ, ನಾನು ಕೇಳುವುದಿಲ್ಲ .. ನಿನಗೆ ತೊಂದರೆ ಕೊಡುವುದಿಲ್ಲ.. ದಯವಿಟ್ಟು, ಬೇಡಾ ಎನ್ನದೇ ನನ್ನನ್ನು ಜಾತ್ರೆಗೆ ಕರೆದುಕೊಂಡು ಹೋಗಪ್ಪಾ ಎಂದು ರೋಧಿಸುತ್ತಿದನು. 'ಆಯ್ತು ನಡೆಯಪ್ಪ ಅಲ್ಲಿ ಏನೂ ತೊಂದರೆ ಕೊಡಬಾರದು. ಅದೂ ಬೇಕು... ಇದು ಬೇಕು ಕೇಳಬಾರದು' ಎಂದು ತಾಕೀತು ಮಾಡಿ ಪ್ರಕಾಶನನ್ನು ಜೊತೆಯಲ್ಲಿ ಕರೆದುಕೊಂಡು ಮಹದೇಶನ ಜಾತ್ರೆಗೆ ಹೋದರು. ಜಾತ್ರೆಯಲ್ಲಿ ಹೋಗುವುದೇ ತಡ...ಅಲ್ಲಿ ಬ್ಯಾಟು ಚಂಡು, ಬಗೆ ಬಗೆ ಮಿಠಾಯಿ, ಆಟದ ಸಾಮಾನು, ಜಾರುಗುಂಡೆ ಆಟ, ಹೀಗೇ ಒಂದೊಂದೇ ಪ್ರಕಾಶನ ಕಣ್ಣಿಗೆ ಬೀಳುತ್ತವೆ. ಸಂತಸಗೊಂಡ ಪ್ರಕಾಶನು' ಅಪ್ಪಾ.. ನನಗೆ ಅದು ಬೇಕು ಇದೂ ಬೇಕು... ಎಂದು ಹಠ ಮಾಡಲು ಆರಂಭಿಸುತ್ತಾನೆ. ಅಪ್ಪ ವಿಚಲಿತ ನಾಗುತ್ತಾನೆ.. ಜೋರಾಗಿ ಹೆಜ್ಜೆ ಇಡುತ್ತಾ ಮಹದೇಶನ ಸನ್ನಿಧಿಯತ್ತ ಸಾಗುತ್ತಾನೆ. ಅಲ್ಲಿ ತುಂಬಾ ಜನಸಂದಣಿ ಇತ್ತು. ಆಕಡೆ ಈ ಕಡೆ ನೋಡುತ್ತಿದ್ದಂತೆಯೇ ಪ್ರಕಾಶನು ಅಪ್ಪನಿಂದ ತಪ್ಪಿಸಿಕೊಂಡು ಬಿಟ್ಟನು. ಅಪ್ಪಾ.. ಅಪ್ಪಾ.. ಎಂದು ಚೀರುತ್ತಾ ಹೊರಟರು ಕೂಡ ಪ್ರಕಾಶನಿಗೆ ಅಪ್ಪನ ಸುಳಿವು ಸಿಗಲಿಲ್ಲ. ಮಗು ಅಳುತ್ತಿರುವುದನ್ನು ಕಂಡ ಅನೇಕರು ಈತನ ಬಳಿ ಬಂದು.. ಅಳಬೇಡ ಮಗು ನಿಮ್ಮಪ್ಪ ಈಗಲೇ ಬರ್ತಾರೆ.. ನಿನಗೆ ಏನು ಬೇಕು ಕೇಳು ಕೊಡಿಸುತ್ತೇವೆ ಎನ್ನುತ್ತಾ ಒಬ್ಬರು, ಬ್ಯಾಟು, ಚಂಡು, ಕೊಡಿಸುತ್ತೇನೆ ಎಂದರು. ಇನ್ನೊಬ್ಬರು ಲಾಡು ಲಡ್ಡು ಮಿಠಾಯಿ ಏನು ಬೇಕು ತಗೋ ನಾನು ದುಡ್ಡು ಕೊಡ್ತೀನಿ ಎಂದರು. ಮತ್ತೊಬ್ಬರು ಬಂದು, 'ಮಗು ನಿನಗೆ ಯಾವ ಆಟಿಕೆ ಸಾಮಾನು ಬೇಕು ಹೇಳು ನಾನು ಕೊಡಿಸುತ್ತೇನೆ ' ಎಂದರು... ಅಷ್ಟೊತ್ತಿಗಾಗಲೇ ಪ್ರಕಾಶನ ತಂದೆ ಅಲ್ಲಿ ಬಂದಿದ್ದರು. 'ನನಗೆ ಏನೂ ಬೇಡಾ.. ಅಪ್ಪಾ ಬೇಕು.. ' ಎನ್ನುತ್ತಾ ತಂದೆಯನ್ನು ತಬ್ಬಿಕೊಂಡು ಪ್ರಕಾಶನು ಜೋರಾಗಿ ದುಃಖಿಸತೊಡಗಿದನು. ಮಗುವನ್ನು ಸಂತೈಸುತ್ತಾ 'ಅಳಬೇಡ ಮಗು ನಿನಗೆ ಏನು ಬೇಕು ಹೇಳು ಕೊಡಿಸುತ್ತೇನೆ' ಎನ್ನುತ್ತಾನೆ. ಪ್ರಕಾಶನು ಜೋರಾಗಿ ದುಃಖಿಸುತ್ತಲೇ..'ಅಪ್ಪಾ ನನಗೆ ಏನೂ ಬೇಡಾ..ನೀನೇ ಬೇಕು... ನನಗೆ ಅಪ್ಪನೇ ಎಲ್ಲಾ' ಎಂದು ಪ್ರಕಾಶನು ಜೋರಾಗಿ ಹೇಳುತ್ತಿದ್ದಂತೆಯೇ ಅಲ್ಲಿ ನೆರೆದವರಿಗೆ ತುಂಬಾ ಖುಷಿಯಾಯಿತು.

ತನ್ನ ಕಣ್ಣೆದುರು ನೂರಾರು ಆಟಿಕೆಗಳು, ತಿಂಡಿಗಳು ಮತ್ತು ಅಪರಿಚಿತರು ಅವುಗಳನ್ನು ಕೊಡಿಸಲು ಮುಂದೆ ಬಂದರೂ ಪ್ರಕಾಶನಿಗೆ ಅಪ್ಪನ ಸಾಮಿಪ್ಯವೇ ಎಲ್ಲಕ್ಕಿಂತ ಮಿಗಿಲಾಗಿತ್ತು. ಕಳೆದುಹೋದಾಗ ಆದ ಭಯ ಮತ್ತು ಮರಳಿ ಅಪ್ಪನನ್ನು ಕಂಡಾಗ ಉಂಟಾದ ಭಾವುಕತೆ ಅವನಲ್ಲಿ ಹೊಸ ಅರಿವನ್ನು ಮೂಡಿಸಿತು. ಪ್ರಪಂಚದ ಯಾವ ಐಷಾರಾಮಿ ವಸ್ತುಗಳೂ ಅಪ್ಪನ ಪ್ರೀತಿಗೆ ಮತ್ತು ರಕ್ಷಣೆಗೆ ಸಾಟಿಯಲ್ಲ ಎಂಬುದನ್ನು ಅವನು ಅರ್ಥಮಾಡಿಕೊಂಡನು. ತಾಯಿಗಿಂತ ದೇವರಿಲ್ಲ ಅಪ್ಪನಂತಹ ಬಂಧು ಇಲ್ಲ ಎಂಬ ಅರಿವು ಪ್ರಕಾಶನ ಮನದಲ್ಲಿ ಶಾಶ್ವತವಾಗಿ ಹೊಮ್ಮಿತು.

■ ಗುರುನಾಥ ಸುತಾರ
। ಹುಲ್ಯಾಳ

ಜೀವ, ಆತ್ಮ, ನಾನು...

ನನ್ನ ಬಾಳಿಗೆ ಒಂದು ಗುರಿ ಬೇಕು. ಅದನ್ನು ತಲುಪಲು ಸಾಧನೆಯನ್ನು ಮಾಡಬೇಕು ಎಂದಾಗ ಆ ಗುರಿ ಮತ್ತು ಅದಕ್ಕೆ ಬೇಕಾದ ಸಾಧನೆಯನ್ನು ತಿಳಿವ ತನಕ ನಾನೇನು ಮಾಡಬೇಕು ಎನ್ನುವ ಪ್ರಶ್ನೆ ಧುತ್ತೆಂದು ಕಾಡುತ್ತದೆ. ನಾನು ಹುಟ್ಟುವಾಗ ಗುರಿ ಹಿಡಿದು ಬಂದಿಲ್ಲ ಅಥವಾ ಅದು ನನ್ನ ನೆನಪಿನಲ್ಲಿಲ್ಲ. ಸಾಧನೆಯ ಮಾರ್ಗಗಳನ್ನು ತಿಳಿದು ಬಂದಿಲ್ಲ. ಅಥವಾ ಅದು ನನ್ನ ನೆನಪಿನಲ್ಲಿಲ್ಲ. ನನ್ನ ಬದುಕಿನಲ್ಲಿ ಬೆಳವಣಿಗೆಯಾದ ಹಾಗೆ, ನನಗೆ ನನ್ನ ಗುರಿ ಕಾಣಬಹುದು. ಮುಂದಿನ ಯಾವುದೇ ಗುರಿಯ ಸಾಧನೆಗೆ ನನ್ನನ್ನು ನಾನು ತಿಳಿದು ದೇಹ ಮನಸ್ಸುಗಳನ್ನು ಅಣಿಗೊಳಿಸಕೊಳ್ಳಬೇಕು. ನನ್ನನ್ನು ನಾನು ಅರಿವ ಕೆಲಸ ಮಾಡಬೇಕು. ನಾನು ಎಂದರೇನು ಎನ್ನುವುದು ಮೊದಲ ಚಿಂತನೆ. 'ನಾನು' ಇಂದ 'ನನ್ನದು' ಎನ್ನುವುದು ದ್ವೈತ. ನನ್ನ ದೇಹ, ನನ್ನ ಕೈ, ಕಾಲುಗಳು, ನನ್ನ ಕಣ್ಣುಗಳು ಎಂದಾಗ ನಾನು ಬೇರೆ, ನನ್ನದು ಬೇರೆ ಎನ್ನುವುದು ಅರ್ಥವಾಗುತ್ತವೆ.

ದೇಹ ನನ್ನದು ಎಂದಾಗ ಈ ದೇಹವನ್ನು ತನ್ನ ನಿರೀಕ್ಷಣೆಯಂತೆ ನಡೆಸುವ ಶಕ್ತಿ ಆ 'ನಾನು' ಎನ್ನುವುದು ಅರ್ಥವಾಗುತ್ತದೆ. ಆ ಶಕ್ತಿಯನ್ನು 'ಜೀವ' ಎನ್ನುತ್ತೇವೆ. 'ಆತ್ಮ' ಎನ್ನುತ್ತೇವೆ. ಆ ಜೀವ ಯಾವುದೋ ಸಾಧನೆಯನ್ನು ಮಾಡಲು ಈ ಸಾಧನಾ ಶರೀರವನ್ನು ಹೊಂದಿ ಅವತರಿಸಿದೆ. ದೇಹವಿಲ್ಲದೆ ಜೀವನಿಗೆ ಸಾಧನೆಯನ್ನು ಮಾಡಲು ಸಾಧ್ಯವಿಲ್ಲ. ಈ ದೇಹ ಇರುವವರೆಗೆ ಆ ಜೀವ ಈ ದೇಹದಲ್ಲಿ. ಈ ದೇಹ ಆರೋಗ್ಯಕರವಾಗಿ ಇರುವಾಗ ಜೀವಕ್ಕೆ ದೇಹದ ಉತ್ತಮ ಉಪಯೋಗ. ನಾನು ಆ ಜೀವದ ಸಾಧನಾ ಸಂಕಲ್ಪವನ್ನು ತಿಳಿಯುವ ತನಕ, ಈ ದೇಹವನ್ನು ಉತ್ತಮ ಮಟ್ಟದಲ್ಲಿಟ್ಟುಕೊಳ್ಳಬೇಕು. ಅದು ನನ್ನ ಮೊದಲ ಕರ್ತವ್ಯ.

ಹಣ್ಣಿನಿಂದ ವಿದ್ಯುತ್ ತಯಾರಿಸಬಹುದು ಗೊತ್ತಾ..?

ಲಿಂಬೆ ಹಣ್ಣಿನ ಬ್ಯಾಟರಿ (Lemon Battery)

ವಿಜ್ಞಾನ ಎಂಬುದು ಕೇವಲ ಪುಸ್ತಕದ ಬದನೆಕಾಯಿಯಲ್ಲ, ಅದು ಪ್ರಾಯೋಗಿಕ ಸತ್ಯ. ವಿದ್ಯುತ್ ತಯಾರಿಸಲು ಕೇವಲ ಬೃಹತ್ ಪವರ್ ಪ್ಲಾಂಟ್‌ಗಳೇ ಬೇಕು ಎಂದು ನೀವು ಭಾವಿಸಿದ್ದರೆ, ಈ ಲಿಂಬೆ ಹಣ್ಣಿನ ಪ್ರಯೋಗ ನಿಮ್ಮ ಆಲೋಚನೆಯನ್ನು ಖಂಡಿತಾ ಬದಲಿಸುತ್ತದೆ. ನಮ್ಮ ಮನೆಯಲ್ಲಿರುವ ಒಂದು ಸಾಮಾನ್ಯ ಲಿಂಬೆ ಹಣ್ಣಿನಿಂದಲೂ ಪುಟ್ಟ ಬಲ್ಬ್ ಉರಿಸಬಹುದು ಎಂಬುದು ಆಶ್ಚರ್ಯವಾದರೂ ನೂರಕ್ಕೆ ನೂರರಷ್ಟು ಸತ್ಯ. ಈ ಕುತೂಹಲಕಾರಿ ಪ್ರಯೋಗದ ಸಂಪೂರ್ಣ ವಿವರ ಇಲ್ಲಿದೆ:



ಅಗತ್ಯವಿರುವ ವಸ್ತುಗಳು

- **ಲಿಂಬೆ ಹಣ್ಣು:** ಒಂದು ತಾಜಾ ಮತ್ತು ರಸಭರಿತವಾದ ಲಿಂಬೆ ಹಣ್ಣು.
- **ತಾಮ್ರದ ವೈರ್ (Copper wire):** ಇದು ಧನ ವಿದ್ಯುದ್ವಾರವಾಗಿ (Positive Electrode) ಕಾರ್ಯನಿರ್ವಹಿಸುತ್ತದೆ.
- **ಸತುವು ಲೇಪಿತ ಉಗುರು (Zinc nail):** ಇದು ಋಣ ವಿದ್ಯುದ್ವಾರವಾಗಿ (Negative Electrode) ಕೆಲಸ ಮಾಡುತ್ತದೆ.
- **ಸಣ್ಣ ಎಲ್.ಇ.ಡಿ (LED) ಬಲ್ಬ್:** ವಿದ್ಯುತ್ ಹರಿವನ್ನು ಪರೀಕ್ಷಿಸಲು ಈ ಬಲ್ಬ್ ಅಗತ್ಯ.

ಪ್ರಯೋಗ ಮಾಡುವ ವಿಧಾನ

ಮೊದಲು ಲಿಂಬೆ ಹಣ್ಣನ್ನು ಸ್ವಲ್ಪ ಮೆತ್ತಗಾಗುವಂತೆ ಉಜ್ಜಿಕೊಳ್ಳಿ (ಇದರಿಂದ ಒಳಗೆ ರಸ ಹೆಚ್ಚಾಗಿ ಬಿಡುಗಡೆಯಾಗುತ್ತದೆ). ನಂತರ ಲಿಂಬೆ ಹಣ್ಣಿನ ಒಂದು ಬದಿಗೆ ತಾಮ್ರದ ವೈರ್ ಅನ್ನು ಮತ್ತು ಇನ್ನೊಂದು ಬದಿಗೆ ಸತುವಿನ ಮೊಳೆಯನ್ನು ಚುಚ್ಚಿ. ಗಮನಿಸಿ, ಇವೆರಡೂ ಹಣ್ಣಿನ ಒಳಗೆ ಒಂದಕ್ಕೊಂದು ತಾಗಬಾರದು. ಈಗ ಹೊರಗೆ ಉಳಿದಿರುವ ವೈರ್ ಮತ್ತು ಮೊಳೆಯ ತುದಿಯನ್ನು ಎಲ್.ಇ.ಡಿ ಬಲ್ಬ್‌ನ ಎರಡು ಕಾಲುಗಳಿಗೆ (ಟರ್ಮಿನಲ್ಸ್) ಸರಿಯಾಗಿ ಸಂಪರ್ಕಿಸಿ.

ವೈಜ್ಞಾನಿಕ ಹಿನ್ನೆಲೆ

ಸಂಪರ್ಕ ಪೂರ್ಣಗೊಂಡ ತಕ್ಷಣ ಬಲ್ಬ್ ಮಂದವಾಗಿ ಉರಿಯಲು ಪ್ರಾರಂಭಿಸುತ್ತದೆ. ಇದರ ಹಿಂದಿರುವ ಅಸಲಿ ರಹಸ್ಯವೆಂದರೆ ಲಿಂಬೆ ಹಣ್ಣಿನ ರಸದಲ್ಲಿರುವ ಸಿಟ್ರಿಕ್ ಆಮ್ಲ. ಈ ಆಮ್ಲವು ಇಲ್ಲಿ 'ವಿದ್ಯುದ್ವಿಚ್ಛೇದ್ಯ' (Electrolyte) ಆಗಿ ವರ್ತಿಸುತ್ತದೆ. ಯಾವಾಗ ನಾವು ತಾಮ್ರ ಮತ್ತು ಸತುವನ್ನು ಆಮ್ಲದಲ್ಲಿ ಇರಿಸುತ್ತೇವೆಯೋ, ಆಗ ಅಲ್ಲಿ ರಾಸಾಯನಿಕ ಕ್ರಿಯೆ ನಡೆದು ಎಲೆಕ್ಟ್ರಾನ್‌ಗಳ ಚಲನೆ ಆರಂಭವಾಗುತ್ತದೆ. ಈ ಪ್ರಕ್ರಿಯೆಯು ಲಿಂಬೆ ಹಣ್ಣಿನಲ್ಲಿರುವ ರಾಸಾಯನಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಬದಲಾಯಿಸುತ್ತದೆ, ಇದರಿಂದಾಗಿ ಬಲ್ಬ್ ಬೆಳಗುತ್ತದೆ.
ಇದು ಒಂದು ಅತ್ಯುತ್ತಮ ಶೈಕ್ಷಣಿಕ ಪ್ರಯೋಗವಾಗಿದ್ದು, ವಿದ್ಯುತ್ ಶಕ್ತಿಯ ಮೂಲ ತತ್ವಗಳನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಲು ಸಹಕಾರಿಯಾಗಿದೆ.

ನೀವೂ ಬಣ್ಣ ಹಚ್ಚಿ



ಚಿತ್ರ ಬಿಡಿಸಿ ಸಂಭ್ರಮಿಸಿ



ಇತಿಹಾಸದಲ್ಲಿ ಇಂದು

5 ಮೇ 2026

ಡಾ. ಕೇಶವ ನೀರಾ, 81475 67182

ಅಂತಾರಾಷ್ಟ್ರೀಯ ಶುಶ್ರೂಷಕಿಯರ ದಿನ

ಗರ್ಭಾವಸ್ಥೆಯಲ್ಲಿ, ಹೆರಿಗೆಯ ಸಮಯದಲ್ಲಿ ಮತ್ತು ಹೆರಿಗೆಯ ನಂತರ ಮಹಿಳೆಯರು ಮತ್ತು ಅವರ ಕುಟುಂಬಗಳಿಗೆ ಆರೈಕೆ ನೀಡುವಲ್ಲಿ ಶುಶ್ರೂಷಕಿಯರು ವಹಿಸುವ ಪ್ರಮುಖ ಪಾತ್ರವನ್ನು ಗುರುತಿಸಲು ಪ್ರತಿ ವರ್ಷ ಮೇ 5ರಂದು ಅಂತಾರಾಷ್ಟ್ರೀಯ ಶುಶ್ರೂಷಕಿಯರ ದಿನವನ್ನು ಈ ದಿನ ಆಚರಿಸಲಾಗುತ್ತದೆ.

ಜನನ ಬಂಗಾಳಿ ಕ್ರಾಂತಿಕಾರಿ ರಾಷ್ಟ್ರೀಯತಾವಾದಿ ಪ್ರೀತಿಲತಾ ವಡ್ಡೇದಾರ್ 1911ರಲ್ಲಿ ಬಾಂಗ್ಲಾದೇಶದ ಚಟ್ಟೋಗ್ರಾಮ್ ಜಿಲ್ಲೆಯ ಪಾಟಿಯಾ ಪ್ರಾಂತ್ಯದ ಧಲ್ಘಾಟ್ ಗ್ರಾಮದಲ್ಲಿ ಜನಿಸಿದರು. 1932ರಲ್ಲಿ ಪಹರ್ತಲಿ ಯುರೋಪಿಯನ್ ಕ್ಲಬ್ ಮೇಲೆ ನಡೆದ ಸಶಸ್ತ್ರ ದಾಳಿಯಲ್ಲಿ ಹದಿನೈದು ಕ್ರಾಂತಿಕಾರಿಗಳನ್ನು ಮುನ್ನಡೆಸಿದ್ದಕ್ಕಾಗಿ ಹೆಸರುವಾಸಿಯಾದ ಇವರು ಕ್ಲಬ್ ಅನ್ನು ಸುಟ್ಟುಹಾಕಿದರು ಮತ್ತು ನಂತರ ಬ್ರಿಟಿಷ್ ಪೊಲೀಸರಿಗೆ ಸಿಕ್ಕಿಬಿದ್ದರು. ಬಂಧನವನ್ನು ತಪ್ಪಿಸಿಕೊಳ್ಳಲು, ಸೈನೈಡ್ ಸೇವಿಸಿ ಸಾವನ್ನಪ್ಪಿದರು.

ಫ್ರೆಡ್ರಿಕ್ ಎಂಗೆಲ್ಸ್ ಅವರೊಂದಿಗೆ ಬರೆದ 1848ರ ಕರಪತ್ರ 'ದಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಮತ್ತು ಅವರ ಮೂರು ಸಂಪುಟಗಳ ಮಹತ್ವದ ಕೃತಿ ದಾಸ್ ಕ್ಯಾಪಿಟಲ್‌ಗಾಗಿ ಹೆಚ್ಚು ಹೆಸರುವಾಸಿಯಾದ ಕಾರ್ಲ್ ಮಾರ್ಕ್ಸ್ 1818ರಲ್ಲಿ ಜರ್ಮನಿಯ ಮೊಸೆಲ್ಲೆ ನದಿಯ ದಡದಲ್ಲಿರುವ ಯರ್ಸ್ ನಗರದ ಬ್ರೂಕೆಂಗಾಸ್ಸೆ 664ರಲ್ಲಿ ಹೆನ್ರಿಕ್ ಮಾರ್ಕ್ಸ್ ಮತ್ತು ಹೆನ್ರಿಯೆಟ್ ಪ್ರೆಸ್‌ಬರ್ಗ್ ದಂಪತಿಗಳ ಮಗನಾಗಿ ಜನಿಸಿದರು.

ಶಾಲಾ ಹಾಗೂ ಸ್ಪರ್ಧಾತ್ಮಕ ವಿದ್ಯಾರ್ಥಿಗಳಿಗೆ ಅನುಕೂಲ ಆಗಲೆಂದು ಕಂಪ್ಯೂಟರ್ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳು..



ಕಂಪ್ಯೂಟರ್ ಜ್ಞಾನ

ಚಿರು ನವೋದಯ ತರಬೇತಿ ಕೇಂದ್ರ
94805 91971

22. ಮೈಕ್ರೋಸಾಫ್ಟ್ ಪವರ್ ಪಾಯಿಂಟ್‌ನಲ್ಲಿ, ಶಬ್ದ ಪರಿಣಾಮ ಕಡತಗಳ ಈ ಎರಡು ಪ್ರಕಾರಗಳನ್ನು ನಿರೂಪಣೆಗೆ ಸೇರಿಸಲಾಗುವುದು

1). wav files ಮತ್ತು mid files
2). wav files ಮತ್ತು gif files
3). mid files ಮತ್ತು jpg files
4). mid files ಮತ್ತು gif files

ಉತ್ತರ: 1).wav files ಮತ್ತು mid files
ವಿವರಣೆ: wav files → Waveform Audio File Format
mid files → Musical Instrument Digital Interface.

23. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಟಿಪ್ಪಣಿ ಹಲಗೆಯು ಕೇಳುವವರೊಂದಿಗೆ (audience) ಹಂಚಿಕೊಳ್ಳಲು ನೀವು ಬಯಸಿದರೆ ಟಿಪ್ಪಣಿಗಳ ಮಾಹಿತಿಯನ್ನು ಅಥವಾ ಸ್ವೀಕಾರನ್ನು ಸೇರಿಸಲು ನಿಮಗೆ ಅನುಮತಿಸುತ್ತದೆ.
(b) ಜಾರುಫಲಕ ಮಾರ್ಗಸೂಚನೆ ಸಾಧನ ನೋಟವು ನೋಟ ಮಾತ್ರವಾಗಿದ್ದು ಇದನ್ನು ಪವರ್ ಪಾಯಿಂಟ್‌ನಲ್ಲಿ ಬಳಸಲಾಗುತ್ತದೆ.
ಸರಿಯಾದ ಆಯ್ಕೆ ಆರಿಸಿ ಬರೆಯಿರಿ.
1) (a) ಮಾತ್ರ ಸರಿಯಾಗಿದೆ
2) (b) ಮಾತ್ರ ಸರಿಯಾಗಿದೆ
3) (a) ಮತ್ತು (b) ಎರಡೂ ಸರಿಯಾಗಿದೆ
4) (a) ಮತ್ತು (b) ಯಾವುದೂ ಸರಿಯಾಗಿಲ್ಲ
ಉತ್ತರ: 1) (a) ಮಾತ್ರ ಸರಿಯಾಗಿದೆ

24. ಪ್ರೊಸೆಸರನ್ನು ಯಾವುದರಲ್ಲಿ ಅಡಗಿಸಲಾಗಿದೆ?

1) ಕೀಬೋರ್ಡ್ 2) ಎಕ್ಸ್‌ಪ್ಯಾನ್ಸನ್ ಸ್ಲಾಟ್
3) ಚಿಪ್ ಬೋರ್ಡ್ 4) ಮದರ್ ಬೋರ್ಡ್
ಉತ್ತರ: 4
ವಿವರಣೆ: Processor also known as CPU resides on Motherboard. CPU ಮತ್ತು ಸ್ಮರಣೆಗಳು (memory) ಮಾತೃಫಲಕದ (motherboard) ಮೇಲೆ ಇರುತ್ತವೆ.

ಮುಂದುವರಿಯುತ್ತದೆ..

ಎಲ್ಲ ಪ್ರಾಣಿಗಳನ್ನೂ ಪ್ರೀತಿಸೋಣ

ನಾಯಿಗಳು ಕಂಡತಕ್ಷಣ ಕೈಯಲ್ಲಿ ಕಲ್ಲು ಎತ್ತಿಕೊಳ್ಳುತ್ತೇವೆ. ಎತ್ತು, ಎಮ್ಮೆಗಳು ಕಂಡಾಗ ಕೋಲು ತೆಗೆದುಕೊಳ್ಳುತ್ತೇವೆ. ಬೆಕ್ಕು, ಮಂಗ, ಹಂದಿಗಳನ್ನು ಹೆದರಿಸಿ ಓಡಿಸುತ್ತೇವೆ. ಆದರೆ ನಮ್ಮ ಜೊತೆ ಸಹಜೀವಿಗಳಾಗಿ ವಾಸಿಸುವ ಪ್ರತಿಯೊಂದು ಜೀವಿಯೂ ಪರಿಸರದಲ್ಲಿ ತನ್ನದೇ ಆದ ಕಾರ್ಯವನ್ನು ಪೂರೈಸಲು ಜನ್ಮವೆತ್ತಿದೆ. ಅದಿಲ್ಲದೇ ಪರಿಸರದ ಸಮತೋಲನ ಅಸಾಧ್ಯ. ಸಿಂಹ, ಹುಲಿ, ಆನೆ, ಕಾಡೆಮ್ಮೆಗಳಂತಹ ಕಾಡು ಪ್ರಾಣಿಗಳೂ ನಮಗೆ ಸಹಕಾರಿಯಾಗಿವೆ. ಅವಿಲ್ಲದೇ ಹೋಗಿದ್ದರೆ ನಮ್ಮ ಬದುಕು ದುಸ್ತರವಾಗುತ್ತಿತ್ತು. ಕಾಡಿನಲ್ಲಿ ವಾಸವಾಗಿದ್ದ ಒಂದೇ ಒಂದು ಹುಲಿ ಸತ್ತರೂ ಕಾಡು ಬರಡಾಗಬಹುದು. ಕೇಳಿಲ್ಲವೇ ಸಿಂಹವು ಮೊಲವನ್ನು ಕೊಂದ ಕಥೆ?

ಸಿಂಹವು ಮೊಲವನ್ನು ಕೊಂದ ನಂತರ

ಸಿಂಹವನ್ನು ಮೊಲ ಸಾಯಿಸಿದ ಪಂಚತಂತ್ರದ ಪ್ರಸಿದ್ಧ ಕಥೆ. ನಾವು ಬಾಲ್ಯದಿಂದಲೂ ಈ ಕಥೆಯನ್ನು ಕೇಳುತ್ತಾ ಬೆಳೆದಿದ್ದೇವೆ. ಮೊಲವನ್ನು ಹೀರೋ ದೃಷ್ಟಿಯಲ್ಲಿ ಕಂಡಿದ್ದೇವೆ. ಕಥೆಯಲ್ಲಿ ಸಿಂಹ ಸತ್ತ ನಂತರ ಸಂಭ್ರಮಿಸಿದ್ದೇವೆ. ಆದರೆ ವಾಸ್ತವ ಹೀಗಿದೆ. ಕಾಡಿಗೆ ಒಂದೇ ಒಂದು ಮಾಂಸಾಹಾರಿಯಾಗಿದ್ದ ಸಿಂಹದ ಸಾವು ಅರಣ್ಯ ಪ್ರದೇಶದ ಜಿಂಕೆಗಳನ್ನು, ಮೊಲಗಳನ್ನು, ಕಾಡೆಮ್ಮೆಗಳು ಹೆಚ್ಚಾಗುವಂತೆ ಮಾಡುತ್ತದೆ. ಅವು ಅಲ್ಲಿನ ಹುಲ್ಲುಗಾವಲನ್ನೆಲ್ಲಾ ಮೇಯ್ದು ಖಾಲಿ ಮಾಡಿದವು. ದೊಡ್ಡ ಪ್ರಾಣಿಗಳು ಮರಗಿಡಗಳನ್ನೂ ಬಿಡದೇ ಅದರ ಎಲೆಗಳನ್ನು ತಿಂದು ಹಾಕಿದವು. ಮುಂದೆ ಮಳೆಗೆ ಅಲ್ಲಿನ ಮಣ್ಣಿನ ಸವಕಳಿ ಆಗಿ ಗಿಡ, ಮರಗಳು ನೆಲಕ್ಕೆ ಉರುಳಿದವು. ಹಲವು ವರ್ಷಗಳಲ್ಲಿ ಅಲ್ಲಿನ ಸಸ್ಯಾಹಾರಿ ಪ್ರಾಣಿಗಳು ಆಹಾರದ ಅಭಾವದಿಂದ ಸತ್ತು ಹೋದವು. ಮುಂದೆ ಕಾಡೆಲ್ಲಾ ಬರಿದಾಗಿ ಮರಭೂಮಿಯಾಯಿತು. ವಿಚಿತ್ರವಲ್ಲವೇ? ಕಾಡಿನ ದುಷ್ಟ ಪ್ರಾಣಿಯೆಂದುಕೊಂಡಿದ್ದ ಸಿಂಹದ ಸಾವು ಅಲ್ಲಿನ ಪರಿಸರದ ವಿನಾಶಕ್ಕೆ ಹೀಗೆ ಕಾರಣವಾಯಿತು.

ಪರಿಸರ ಸ್ವಚ್ಛಗೊಳಿಸುವ ಹಂದಿಗಳು

ಬಹುಶಃ ಹಂದಿಗಳು ಇರದೇ ಹೋಗಿದ್ದರೆ ನಮ್ಮ ಸುತ್ತಮುತ್ತಲಿನ ಪರಿಸರವೆಲ್ಲಾ ಜೈವಿಕ ವಸ್ತುಗಳ ಕೊಳೆಯುವಿಕೆಯಿಂದ ಗಬ್ಬು ನಾರುತ್ತಿತ್ತು. ನಾವು ಎಸೆಯುವ ಉಳಿದ ಆಹಾರ ಪದಾರ್ಥಗಳು, ಮುಸುರಿ, ವ್ಯರ್ಥ ತರಕಾರಿ ಇತ್ಯಾದಿಗಳನ್ನು ಹಂದಿಗಳು ತಿಂದು ಪರಿಸರದಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ಆದರೆ ಕೆಲವು ಜನ ಹಂದಿಗಳನ್ನು ಕಂಡರೆ ತಮ್ಮ ಶತ್ರುಗಳನ್ನು ಕಂಡಂತೆ ವರ್ತಿಸುತ್ತಾರೆ. ಇದು ಸರಿಯಾದುದಲ್ಲ.

ಬೀಜಪ್ರಸರಣಕ್ಕೆ ಕಾರಣವಾಗುವ ಮಂಗಗಳು

ಮಂಗಗಳು ಬೇಸಿಗೆಯ ಸಮಯದಲ್ಲಿ ಆಹಾರಕ್ಕಾಗಿ ಮರದಿಂದ ಮರಕ್ಕೆ ಅಲೆಯುತ್ತವೆ. ಆ ಕಾಲದಲ್ಲಿ ಲಭ್ಯವಿರುವ ಹಣ್ಣುಗಳನ್ನು ಯಥೇಚ್ಛವಾಗಿ ಸೇವಿಸುತ್ತವೆ. ಮಾವು, ನೇರಲೆ, ಹಲಸು, ಆಲ, ಅರಳಿ, ಕಾಡುಬಾದಾಮಿ, ಗೇರು ಹಣ್ಣು ಹೀಗೆ ಹಣ್ಣುಗಳನ್ನು ಬೀಜಸಮೇತವಾಗಿ ತಿಂದು ಮತ್ತೊಂದು ಪ್ರದೇಶಕ್ಕೆ ಸಾಗಿದಾಗ ತಮ್ಮೊಂದಿಗೆ ಬೀಜಗಳನ್ನೂ ತೆಗೆದುಕೊಂಡು ಹೋಗುತ್ತವೆ. ಅಲ್ಲಿ ವಿಸರ್ಜಿಸುವ ಮಲದಲ್ಲಿ ಬೀಜಗಳನ್ನು ಹೊರಹಾಕುತ್ತವೆ. ಮುಂದೆ ಮಳೆಯಾದಾಗ ಅಲ್ಲಿಯೇ ಆ ಸಸಿಗಳು ಹುಟ್ಟಿ ಮರವಾಗುವುದುಂಟು. ಹೀಗೆ ಬೀಜಪ್ರಸರಣದಲ್ಲಿ ಮಂಗಗಳು ಪ್ರಮುಖ ಪಾತ್ರ ವಹಿಸುತ್ತವೆ.

ಹುಲ್ಲು, ಕಸವನ್ನು ನಿಯಂತ್ರಣದಲ್ಲಿಡುವ ದನ ಕರುಗಳು

ಒಂದು ವೇಳೆ ದನಕರುಗಳು ಇರದೇ ಹೋಗಿದ್ದರೆ, ಹುಲ್ಲು ಯಥೇಚ್ಛವಾಗಿ ಬೆಳೆದು ಅಲ್ಲಿ ಬೇರೆ ಗಿಡಮರಗಳ ಬೆಳವಣಿಗೆಗೆ ಅಡ್ಡಿಯುಂಟಾಗುತ್ತಿತ್ತು. ಆದರೆ ದನ ಕರುಗಳು ಬೆಳೆಯುವ ಹುಲ್ಲನ್ನು ಮೇಯುತ್ತ, ಅಲ್ಲಿರುವ ಬೇರೆ ಬೇರೆ ಸಣ್ಣ ಸಸಿಗಳನ್ನು ತಿನ್ನುತ್ತ ಅವುಗಳ ಬೀಜಗಳನ್ನೂ ಮತ್ತೊಂದು ಪ್ರದೇಶಕ್ಕೆ ತೆಗೆದುಕೊಂಡು ಹೋಗುತ್ತವೆ. ಕಳೆ, ಕಸ ದನಕರುಗಳಿಗೆ ಆಹಾರವಾಗಿದೆ. ದನಕರುಗಳು ಇವುಗಳನ್ನು ಮೇಯುವುದರಿಂದ ಇವುಗಳ ನಿಯಂತ್ರಣವಾದಂತಾಗುತ್ತದೆ.

ತಿಳಿಯೋಣ ಬನ್ನಿ

ಡಾ. ಲಿಂಗರಾಜ ರಾಮಾಪೂರ

ನಮ್ಮ ಬದುಕಿನಲ್ಲಿ ಪ್ರಾಣಿಗಳು

- ಅತ್ಯಂತ ನಿಷ್ಠಾವಂತ ಪ್ರಾಣಿಯೆಂದು ಹೆಸರಾಂತ ನಾಯಿಗಳನ್ನು ಮನುಷ್ಯರು ಸುಮಾರು 10,000 ವರ್ಷಗಳಿಗೂ ಹಿಂದೆ ಸಾಕುಪ್ರಾಣಿ ಮಾಡಿಕೊಂಡರು.
- ರಣಹದ್ದುಗಳು, ಹದ್ದುಗಳು ಮತ್ತು ಕಾಗೆಗಳು ಮುಖ್ಯವಾದ ಜಾಡಮಾಲಿ ಹಕ್ಕಿಗಳು. ಮೃತ ದೇಹಗಳನ್ನು ತಿಂದು, ವಿವಿಧ ರೋಗಕಾರಕ ಕ್ರಿಮಿಗಳು ಉಗಮವಾಗುವುದನ್ನು ತಪ್ಪಿಸುತ್ತವೆ.
- ಹಕ್ಕಿಗಳು ಪರಾಗಸ್ಪರ್ಶ ಮಾಡುತ್ತವೆ. ಅನೇಕ ಗಿಡಗಳ ಹೂಗಳು ವಿವಿಧ ಜಾತಿಯ ಹಕ್ಕಿಗಳಿಂದ ಪರಾಗಸ್ಪರ್ಶ ಹೊಂದಿ ಫಲಿತವಾಗುತ್ತವೆ.
- ಕೇರೆ ಹಾವು, ಕಪ್ಪೆ ಮತ್ತು ಇಲಿ ಹೆಗ್ಗಣಗಳನ್ನು ಹೊಲ ಗದ್ದೆಯಲ್ಲಿ ತಿಂದು ರೈತನಿಗೆ ಸಹಾಯ ಮಾಡುತ್ತವೆ.
- ಎರೆಹುಳು ಒಂದು ಹೆಕ್ಟೇರಿಗೆ 1.2ರಿಂದ 1.5 ಟನ್ ಮಣ್ಣನ್ನು ಮೇಲ್ಮೈಗೆ ತಂದು ಮಣ್ಣಿನ ರಚನೆಯನ್ನು ಸುಧಾರಿಸಿ ನೀರು ಚೆನ್ನಾಗಿ ಹರಿಯುವಂತೆ ಮಾಡುತ್ತವೆ.

ಇಲಿ, ಹೆಗ್ಗಣಗಳನ್ನು ನಿಯಂತ್ರಿಸುವ ಬೆಕ್ಕು, ನಾಯಿಗಳು

ಬೆಕ್ಕು ನಾಯಿಗಳನ್ನು ಸಾಕುವುದರಿಂದ ಮನುಷ್ಯನಿಗೆ ತುಂಬಾ ಪ್ರಯೋಜನವಿದೆ. ಈ ಪ್ರಾಣಿಗಳು ಮನುಷ್ಯನಿಗೆ ಉಪದ್ರವ ಕೊಡುವ ಇಲಿ, ಹೆಗ್ಗಣಗಳಂತಹ ಜೀವಿಗಳನ್ನು ತಿಂದು ಅವುಗಳನ್ನು ನಿಯಂತ್ರಿಸುತ್ತವೆ. ಹೀಗೆ ಪರಿಸರದಲ್ಲಿ ಸಮತೋಲನ ಉಂಟಾಗಲು ಕಾರಣವಾಗುತ್ತವೆ.

ಪ್ರಾಣಿಗಳನ್ನೇಕೆ ಪ್ರೀತಿಸಬೇಕು?

ನಿಸರ್ಗದ ಸಮತೋಲನವನ್ನು ಕಾಪಾಡುವಲ್ಲಿ ಪ್ರಾಣಿಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಮಾನವರೂ ಸೇರಿದಂತೆ ಪ್ರತಿಯೊಂದು ಚಿಕ್ಕ ಅಥವಾ ದೊಡ್ಡ ಪ್ರಾಣಿ ಒಂದರ ಮೇಲೆ ಇನ್ನೊಂದು ಅವಲಂಬಿಸಿರುತ್ತವೆ. ಅರಣ್ಯನಾಶ, ಮಾನವ ವಸತಿ ಮತ್ತು ಚಟುವಟಿಕೆಗಳ ಬೆಳವಣಿಗೆ ಪ್ರಾಣಿಗಳ ನೈಸರ್ಗಿಕ ಆವಾಸ ತಾಣಗಳನ್ನು ಕುಗ್ಗಿಸಿದೆ. ಆವಾಸ ನಾಶವು ಅನೇಕ ಜಾತಿಯ ಪ್ರಾಣಿಗಳ ಮೇಲೆ ದೊಡ್ಡ ಒತ್ತಡವಾಗಿ ಕೆಲವಂತೂ ವಿನಾಶವಾಗಿ ಹೋಗಿವೆ. ಆದ್ದರಿಂದ ಉಳಿದಿರುವ ಆವಾಸ ಮತ್ತು ಆ ಮೂಲಕ ಅದರ ವಾಸಿಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ನಮ್ಮ ಮೇಲಿದೆ.

ಪಶುಪ್ರೇಮ ಸಂಪ್ರದಾಯಗಳು

ಪ್ರಾಣಿಗಳ ಬಗ್ಗೆ ಕಾಳಜಿ ಮತ್ತು ಪ್ರೀತಿಯನ್ನು ಉತ್ತೇಜಿಸುವಂತಹ ಪದ್ಧತಿಗಳು ನಮ್ಮ ಸಂಪ್ರದಾಯದಲ್ಲಿವೆ. ಹಸುವಿನಂತಹ ಪ್ರಾಣಿಯನ್ನು ಗೌರವಿಸಿ ಪೂಜಿಸಲಾಗುತ್ತದೆ. ಗೃಹಿಣಿಯರು ಊಟ ಬಡಿಸುವ ಮುಂಚೆ ಕಾಗೆಗೆ ಊಟ ಬಡಿಸುತ್ತಿದ್ದರು. ದಕ್ಷಿಣ ಭಾರತದಲ್ಲಿ ಅಕ್ಕಿ ಹಿಟ್ಟಿನ ರಂಗೋಲಿಯನ್ನು ಮನೆಯ ಮುಂದೆ ಹಾಕುತ್ತಿದ್ದರು. ಇದು ಇರುವೆಗಳಿಗೆ ಆಹಾರ ಹಾಕುವ ಪರೋಕ್ಷ ವಿಧಾನ. ಭಾರತದ ಯಾವುದೇ ಪ್ರದೇಶಕ್ಕೆ ಹೋಗಿ ಅಲ್ಲಿನ ಜನರು ಸಂಪ್ರದಾಯ ಹಾಗೂ ತಮಗೆ ಹಾಗೆ ಮಾಡಲು ಇಚ್ಛೆ ಇರುವ ಕಾರಣ ಹಕ್ಕಿಗಳಿಗೆ ಧಾನ್ಯಗಳನ್ನು ಹಾಕುತ್ತಾರೆ.

ಮಕ್ಕಳೇನು ಮಾಡಬಹುದು?

- ವಿದ್ಯಾರ್ಥಿಗಳು ಸ್ಥಳೀಯ ವನ್ಯ ಜೀವಿಗಳಿಗೆ ಅಂದರೆ ಆ ಪ್ರದೇಶದ ಚಿಕ್ಕ ಪ್ರಾಣಿಗಳು, ಹಕ್ಕಿಗಳು ಮತ್ತು ಕೀಟಗಳಿಗೆ ಹತ್ತಿರಾಗುವ ಅವನ್ನು ಪ್ರೀತಿಸುವ, ವೀಕ್ಷಿಸುವ ಮತ್ತು ಅಧ್ಯಯನ ಮಾಡುವುದನ್ನು ಒಳಗೊಂಡ ವಿವಿಧ ಬಗೆಯ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು.
- ಹಕ್ಕಿಗಳು ಮತ್ತು ಪ್ರಾಣಿಗಳಿಗೆ ಉಣಿಸುವ ತಟ್ಟೆ ಮತ್ತು ನೀರಿನ ತಾಣಗಳನ್ನು ಮಾಡಬಹುದು. ಇವು ಪ್ರಾಣಿಗಳು ಮತ್ತು ಪಕ್ಷಿಗಳನ್ನು ಆಕರ್ಷಿಸುತ್ತದೆ ಮತ್ತು ಮಕ್ಕಳಿಗೆ ಅವುಗಳ ಕೆಲವು ನಡವಳಿಕೆ ಸ್ವರೂಪವನ್ನು ಗಮನಿಸಲು ಅವಕಾಶ ಕಲ್ಪಿಸುತ್ತವೆ.
- ವನ್ಯ ಹೂಗಳ ಅಥವಾ ಮೂಲಿಕಾ ತೋಟವನ್ನು ಬೆಳೆಸಿದರೆ ಚಿಟ್ಟೆಗಳು, ದುಂಬಿಗಳು ಮತ್ತಿತರ ಹುಳು ಹುಪ್ಪಟೆಗಳಿಗೆ ಒಂದು ವಾಸಸ್ಥಾನ ಒದಗಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ. ಹಾಗೆಯೇ ಈ ಪ್ರಾಣಿಗಳನ್ನು ಗಮನಿಸಿ ಅಧ್ಯಯನ ಮಾಡಲು ಅವಕಾಶವಾಗುತ್ತದೆ.

ಇಂದಿನ ದಿನದಲ್ಲಿ ಮಕ್ಕಳು ಪ್ರಾಣಿಗಳೊಡನೆ ಒಡನಾಡುವುದು ಕಡಿಮೆಯಾಗಿದೆ. ಎಷ್ಟೋ ಬಾರಿ ಇಲ್ಲವೇ ಇಲ್ಲ ಅನ್ನಬಹುದಾಗಿದೆ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿವಿಧ ಪ್ರಾಣಿಗಳು ಅವುಗಳ ವಾಸಸ್ಥಾನದ ಅಗತ್ಯತೆಗಳು, ಅವುಗಳ ನಡವಳಿಕೆ ರೀತಿ, ಪರಿಸರದಲ್ಲಿ ಅವುಗಳ ಪಾತ್ರ ಮತ್ತು ಇತರ ಜೀವಿಗಳೊಂದಿಗೆ ಅವುಗಳ ಒಡನಾಟ ಮುಂತಾದವನ್ನು ಕಲಿತುಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು ಮತ್ತು ಎಲ್ಲ ಜೀವ ಜಂತುಗಳ ಬಗ್ಗೆ ಕಳಕಳಿ ಮತ್ತು ಪ್ರೀತಿ ರೂಢಿಸಿಕೊಳ್ಳಲು ಉತ್ತೇಜಿಸಬೇಕು. ಆದ್ದರಿಂದ ಭೂಮಿಯ ಮೇಲಿನ ಯಾವ ಪ್ರಾಣಿಯೂ ದುಷ್ಟ, ಸಾಧು, ಒಳ್ಳೆಯ, ಕೆಟ್ಟ ಪ್ರಾಣಿ ಅಂತ ಇರುವುದಿಲ್ಲ. ನಾವು ಆ ಪ್ರಾಣಿಯನ್ನು ಬರೀ ಮನುಷ್ಯನ ದೃಷ್ಟಿಕೋನದಿಂದ ನೋಡಬಾರದು. ನಮ್ಮ ಜೊತೆ ಬೇರೆ ಜೀವಿಗಳಿಗೂ ವಾಸಿಸುವ ಹಕ್ಕಿದೆ. ಆ ಜೀವಿ ಪರಿಸರದಲ್ಲಿ ನಿರ್ವಹಿಸುವ ವಿಶಿಷ್ಟ ಕಾರ್ಯವನ್ನು ತಿಳಿದುಕೊಳ್ಳುವುದು ಅವಶ್ಯಕ. ಅದರ ಕಾರ್ಯ ನಮಗೆ ಅರ್ಥವಾದಾಗ ನಾವು ಆ ಜೀವಿಯನ್ನು ಪ್ರೀತಿಸಲು ಪ್ರಾರಂಭಿಸುತ್ತೇವೆ. ಅದಕ್ಕೆ ಹೇಳುವುದು 'ಲಿವ್ ಆ್ಯಂಡ್ ಲೆಟ್ ಲಿವ್–ಜೀವಿಸಿ ಮತ್ತು ಜೀವಿಸಲು ಬಿಡಿ.'

ಬೇಸಿಗೆಯಲ್ಲಿ ಬಾಡದಿರಲಿ ಚರ್ಮ

▪ ಪ್ರಶ್ನೆ

ಬೇಸಿಗೆಯ ಧಗೆಗೆ ನನ್ನ ಮಗನಿಗೆ ಕುತ್ತಿಗೆ ಬಳಿ ಬೆವರು ಸಾಲೆ ಆರಂಭವಾಗಿದೆ. ನನಗೆ ಸ್ವಲ್ಪ ಹೊತ್ತು ಬಿಸಿಲಿನಲ್ಲಿ ಹೋಗಿ ಬಂದರೂ ಚರ್ಮ ಟ್ಯಾನ್ ಆಗಿ ಕಪ್ಪಾಗುತ್ತದೆ. ಇದಕ್ಕೆ ಏನು ಮಾಡಬೇಕು? ಪರಿಹಾರ ತಿಳಿಸಿ

▪ ಉತ್ತರ

ಬೇಸಿಗೆ ಕಾಲದಲ್ಲಿ ಚರ್ಮದ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಒಂದು ಸವಾಲಿನ ಕೆಲಸ. ಅತಿಯಾದ ಬಿಸಿಲು ಮತ್ತು ಬೆವರಿನಿಂದಾಗಿ ಬೆವರು ಸಾಲೆ, ಅಲರ್ಜಿ, ತುರಿಕೆ, ಫಂಗಲ್ ಸೋಂಕು, ಉರಿ ಹೀಗೆ ಹಲವಾರು ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

ಬೆವರು ಸಾಲೆ ಚರ್ಮದ ಮೇಲೆ ಸಣ್ಣ ಕೆಂಪು ಗುಳ್ಳೆಗಳ ರೂಪದಲ್ಲಿ ಕಾಣಿಸಿಕೊಂಡು ವಿಪರೀತ ತುರಿಕೆ ಮತ್ತು ಉರಿಯನ್ನು ಉಂಟುಮಾಡುತ್ತದೆ. ಇದು ಸಾಮಾನ್ಯವಾಗಿ ಬೆವರಿನ ಗ್ರಂಥಿಗಳು ಧೂಳು ಅಥವಾ ಕೊಳೆಯಿಂದ ಮುಚ್ಚಿಹೋದಾಗ ಸಂಭವಿಸುತ್ತದೆ.

ಬೆವರು ಸಾಲೆಗೆ ಅತ್ಯಂತ ಸರಳ ಪರಿಹಾರವೆಂದರೆ ದೇಹವನ್ನು ಸದಾ ತಂಪಾಗಿರಿಸಿಕೊಳ್ಳುವುದು. ದಿನಕ್ಕೆ ಎರಡು ಬಾರಿ ತಣ್ಣೀರಿನಲ್ಲಿ ಸ್ನಾನ ಮಾಡುವುದು ಮತ್ತು ಬೆವರಿನ ಅಂಶವನ್ನು ಹೀರಿಕೊಳ್ಳುವ ಹತ್ತಿ ಬಟ್ಟೆಗಳನ್ನು ಧರಿಸುವುದು ಉತ್ತಮ. ಅತಿಯಾದ ಬಿಸಿಲಿನಲ್ಲಿ ಓಡಾಡುವುದನ್ನು ತಪ್ಪಿಸಿ ಮತ್ತು ಸದಾ ಗಾಳಿಯಾಡುವ ಜಾಗದಲ್ಲಿ ಇರಿ. ಸ್ನಾನದ ನಂತರ ಚರ್ಮವನ್ನು ಪೂರ್ಣವಾಗಿ ಒಣಗಿಸಿ, ನಂತರವಷ್ಟೇ ಬಟ್ಟೆ ಧರಿಸಬೇಕು. ಮುಲ್ತಾನಿ ಮಿಟ್ಟಿ ಲೇಪನವು ಬೆವರು ಸಾಲೆಯನ್ನು ಗುಣಪಡಿಸಲು ಸಹಾಯ ಮಾಡುತ್ತದೆ.

ಚರ್ಮದ ಅಲರ್ಜಿಯು ಕೂಡ ಸಾಮಾನ್ಯವಾಗಿದ್ದು ಸೂರ್ಯನ ತೀಕ್ಷ್ಣವಾದ ಅತಿನೇರಳೆ (ಯುವಿ) ಕಿರಣಗಳು ಚರ್ಮದ ಮೇಲೆ ನೇರವಾಗಿ ಬಿದ್ದಾಗ ಚರ್ಮ ಕೆಂಪಾಗುವುದು ಅಥವಾ ಸಣ್ಣ ಸಣ್ಣ ಗುಳ್ಳೆಗಳು ಏಳುವ ಸಾಧ್ಯತೆ ಇರುತ್ತದೆ. ಇದಲ್ಲದೇ ಶುಷ್ಕ ವಾತಾವರಣದಿಂದ ಬೆವರು ಸುಲಭವಾಗಿ ಒಣಗದ ಕಾರಣ ಫಂಗಲ್ ಸೋಂಕು ಉಂಟಾಗಿ ಚರ್ಮದ ಮಡಿಕೆಗಳಲ್ಲಿ ತುರಿಕೆ ಕಾಣಿಸಿಕೊಳ್ಳಬಹುದು. ಚರ್ಮದ ತುರಿಕೆ ಕಾಣಿಸಿಕೊಳ್ಳಲು ಮುಖ್ಯವಾಗಿ ಬೆವರು, ಧೂಳು ಮತ್ತು ಸೂರ್ಯನ ತಾಪವೇ ಕಾರಣವಾಗಿರುತ್ತದೆ. ಬೆವರು ಚರ್ಮದ ಮೇಲೆ ದೀರ್ಘಕಾಲ ಉಳಿದಾಗ ಅಥವಾ ಒಣಗಿದಾಗ ಚರ್ಮದ ರಂಧ್ರಗಳು ಮುಚ್ಚಿಹೋಗಿ ಕಿರಿಕಿರಿ ಉಂಟಾಗುತ್ತದೆ. ಅದರಲ್ಲೂ ಮುಖ್ಯವಾಗಿ ಕುತ್ತಿಗೆ, ಬೆನ್ನು ಮತ್ತು ಕಂಕುಳಿನ ಭಾಗಗಳಲ್ಲಿ ಸಣ್ಣ ಗುಳ್ಳೆಗಳಾಗಿ ತುರಿಕೆ ಪ್ರಾರಂಭವಾಗುತ್ತದೆ.

ಮನೆಮದ್ದು ಅನುಸರಿಸಿ

ಇದಕ್ಕೆ ಸರಳವಾದ ಮನೆಮದ್ದು ಎಂದರೆ ತಣ್ಣೀರಿನ ಸ್ನಾನ. ಸ್ನಾನ ಮಾಡುವ ನೀರಿಗೆ ಸ್ವಲ್ಪ ಬೇವಿನ ಎಲೆಗಳನ್ನು ಹಾಕಿಕೊಂಡರೆ ಬ್ಯಾಕ್ಟೀರಿಯಾ ವಿರೋಧಿ ಗುಣಗಳಿಂದ ತುರಿಕೆ ಕಡಿಮೆಯಾಗುತ್ತದೆ. ಲೋಳೆಸರದ (ಅಲೋವೆರಾ) ತಿರುಳು ಅಥವಾ ಶ್ರೀಗಂಧದ ಲೇಪನವನ್ನು ಹಚ್ಚುವುದರಿಂದ ಚರ್ಮದ ಉರಿ ಮತ್ತು ತುರಿಕೆ ತಕ್ಷಣ ಕಡಿಮೆಯಾಗುತ್ತದೆ. ಏಕೆಂದರೆ ಇದು ಚರ್ಮವನ್ನು ತಂಪುಗೊಳಿಸುತ್ತದೆ. ಹಾಗೆಯೇ ತೆಂಗಿನ ಎಣ್ಣೆಯನ್ನು ಹಚ್ಚುವುದರಿಂದ ಚರ್ಮದ ಶುಷ್ಕತೆ ಕಡಿಮೆಯಾಗಿ ತುರಿಕೆ ನಿಯಂತ್ರಣಕ್ಕೆ ಬರುತ್ತದೆ. ಆದಷ್ಟು ಬಿಗಿಯಾದ ಬಟ್ಟೆಗಳನ್ನು ಧರಿಸುವುದನ್ನು ಬಿಟ್ಟು ಗಾಳಿಯಾಡುವ ಹತ್ತಿ ಬಟ್ಟೆಗಳನ್ನು ಬಳಸಬೇಕು. ದೇಹದಲ್ಲಿ ನೀರಿನಂಶ ಹೆಚ್ಚಾಗಿದ್ದರೆ ಚರ್ಮವು ಒಳಗಿನಿಂದಲೇ ಆರೋಗ್ಯವಾಗಿರುತ್ತದೆ, ಆದ್ದರಿಂದ ಹೆಚ್ಚು ನೀರು ಮತ್ತು ಮಜ್ಜಿಗೆಯನ್ನು ಕುಡಿಯಿರಿ.

ಈ ಸಮಸ್ಯೆಗಳನ್ನು ನಿವಾರಿಸಲು ವೈಯಕ್ತಿಕ ಸ್ವಚ್ಛತೆ ಅತಿ ಅವಶ್ಯಕವಾಗಿದೆ. ಪ್ರತಿದಿನ ಕನಿಷ್ಠ ಎರಡು ಬಾರಿ ತಣ್ಣೀರಿನಲ್ಲಿ ಸ್ನಾನ ಮಾಡುವುದರಿಂದ ಚರ್ಮದ ಮೇಲಿರುವ ಬೆವರು ಮತ್ತು ಬ್ಯಾಕ್ಟೀರಿಯಾಗಳು ದೂರವಾಗುತ್ತವೆ.

ಆಹಾರ ಪದ್ಧತಿ ಹೀಗಿರಲಿ

ಆಹಾರ ಪದ್ಧತಿಯೂ ಚರ್ಮದ ಆರೋಗ್ಯದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ದೇಹದಲ್ಲಿ ನೀರಿನಂಶ ಕಡಿಮೆಯಾದಾಗ ಚರ್ಮವು ಒಣಗಿದಂತೆ ಕಾಣುತ್ತದೆ ಮತ್ತು ಕಿರಿಕಿರಿ ಉಂಟಾಗುತ್ತದೆ ಆದ್ದರಿಂದ ದಿನವಿಡೀ ಸಾಕಷ್ಟು ನೀರು ಕುಡಿಯುವುದು ಅವಶ್ಯಕ. ಎಳನೀರಿನಂತಹ ನೈಸರ್ಗಿಕ ಪಾನೀಯಗಳು ದೇಹದ ಒಳಗಿನ ಉಷ್ಣತೆಯನ್ನು ಸಮತೋಲನದಲ್ಲಿಡುತ್ತವೆ.

ಹಗಲಿನಲ್ಲಿ ಹೊರಹೋಗುವಾಗ ಚರ್ಮವನ್ನು ಪೂರ್ಣವಾಗಿ ಮುಚ್ಚುವ ಬಟ್ಟೆಗಳನ್ನು ಧರಿಸುವುದು ಅಥವಾ ಚರ್ಮಕ್ಕೆ ಮೃದು ಮುಲಾಮನ್ನು ಲೇಪಿಸುವುದು ಸೂರ್ಯನ ಕಿರಣಗಳಿಂದ ರಕ್ಷಣೆ ನೀಡುತ್ತದೆ. ಮಾರುಕಟ್ಟೆಯಲ್ಲಿ ಸಿಗುವ ಸುಗಂಧಭರಿತ ಸೋಪುಗಳ ಬದಲಿಗೆ ಮೃದುವಾದ ಅಥವಾ ನೈಸರ್ಗಿಕ ಪದಾರ್ಥಗಳಿಂದ ಮಾಡಿದ ಸೋಪುಗಳನ್ನು ಬಳಸುವುದು ಅಲರ್ಜಿಯನ್ನು ತಡೆಯಲು ಸಹಕಾರಿ.

ಇನ್ನು ಕೆಲವರಿಗೆ ಬಿಸಿಲಿನಲ್ಲಿ ಹೋಗಿ ಬಂದರೆ ಸೂಕ್ಷ್ಮ ಅಂಗವಾದ ಚರ್ಮ ಉರಿಯುವುದು ಉಂಟು. ಆಗ ಸೌತೆಕಾಯಿ ರಸ ಅಥವಾ ತುರಿದ ಸೌತೆಕಾಯಿಯನ್ನು ಲೇಪಿಸುವುದು ಚರ್ಮಕ್ಕೆ ಹಿತ ನೀಡುತ್ತದೆ. ತೆಳುವಾದ ಹತ್ತಿ ಬಟ್ಟೆಯನ್ನು ತಣ್ಣೀರಿನಲ್ಲಿ ಅದ್ದಿ ಉರಿ ಇರುವ ಭಾಗದ ಮೇಲೆ ಇರಿಸಬಹುದು. ಕೊಬ್ಬರಿ ಎಣ್ಣೆ ಅಥವಾ ಹರಳೆಣ್ಣೆಯನ್ನು ಮೃದುವಾಗಿ ತೊಂದರೆ ಇರುವ ಭಾಗಕ್ಕೆ ಸವರಿದರೂ ಆದೀತು. ಸಾಕಷ್ಟು ಸಮಾಧಾನ ಆಗುತ್ತದೆ.

ಬೇಸಿಗೆಯಲ್ಲಿ ಚರ್ಮದ ಕಾಂತಿಯನ್ನು ಕಾಪಾಡಿಕೊಳ್ಳಲು ರಾತ್ರಿ ಮಲಗುವ ಮುನ್ನ ಮುಖದ ಮೇಲಿನ ಧೂಳು ಮತ್ತು ಜಿಡ್ಡನ್ನು ತೆಗೆಯಲು ಮೃದುವಾದ ಆಯುರ್ವೇದೀಯ ಮುಲಾಮನ್ನು ಬಳಸಿ. ವಾರಕ್ಕೊಮ್ಮೆ ನೈಸರ್ಗಿಕ ಸ್ಕ್ರಬ್ ಬಳಸಿ ಸತ್ತ ಚರ್ಮದ ಕೋಶಗಳನ್ನು ನಿವಾರಿಸಬೇಕು. ತಣ್ಣನೆಯ ಹಾಲನ್ನು ಹತ್ತಿಯ ಸಹಾಯದಿಂದ ಚರ್ಮಕ್ಕೆ ಹಚ್ಚುವುದು ನೈಸರ್ಗಿಕ ಟೋನರ್ ಆಗಿ ಕೆಲಸ ಮಾಡುತ್ತದೆ. ಹೆಚ್ಚು ಎಣ್ಣೆಯುಕ್ತ ಆಹಾರದ ಬದಲು ಹಸಿರು ಸೊಪ್ಪು, ಋತುಕಾಲಿಕ ಹಣ್ಣು ಮತ್ತು ತಾಜಾ ತರಕಾರಿಗಳನ್ನು ಸೇವಿಸಿ ಮತ್ತು ಒತ್ತಡವಿಲ್ಲದೇ ದಿನವೂ ರಾತ್ರಿ ಎಂಟು ಗಂಟೆಗಳ ಕಾಲ ಗಾಢ ನಿದ್ರೆಯನ್ನು ಮಾಡಬೇಕು.

481 ವಿದ್ಯಾರ್ಥಿ ಬಂಧ

ರಾಜಾ ಸಂಗಮೇಶ ಎಸ್. ಹಿರೇಮಠ



ಎಡದಿಂದ ಬಲಕ್ಕೆ

1. ನಿಶ್ಚಿತ–ನಿಖರವಾಗಿ ಎಂಬರ್ಥದ ಶಬ್ದ (3)
4. ತುಂಬ ಕಡಿಮೆ ಸಮಯ ಇರುವಂಥಾದ್ದು (3)
6. ಚಲಾವಣೆಯಲ್ಲಿರುವ ನಾಣ್ಯ–ದುಡ್ಡು (2)
7. ಕೆಲಸದ ನಡುವಿನ ಬಿಡುವಿನ ಸಮಯ (3)
9. ಜೀವಿಯ ಜೈವಿಕ ಕ್ರಿಯೆ ಕೊನೆಗೊಳ್ಳುವುದು (3)
11. ಲೆಕ್ಕದಲ್ಲಿ ಇವುಗಳೊಳಗಿರುವ ಕ್ರಿಯೆ ಮೊದಲು ಮಾಡುತ್ತೇವೆ (2)
12. ಪದ ಹಾಡುತ್ತಿರುವ ವ್ಯಾಪಾರಿ (3)
13. ವಾಸಯೋಗ್ಯ, ಛಾವಣಿ ಗೋಡೆ ಹೊಂದಿರುವ ರಚನೆ (3)

ಮೇಲಿನಿಂದ ಕೆಳಕ್ಕೆ

2. 'ಈ ಕೂಡಲೆ' ಎಂಬರ್ಥದ ಶಬ್ದ (3)
3. ನುರಿತವನು–ಪ್ರಚಂಡ (3)
5. ಪದ್ಯ–ಕಾವ್ಯ ರಚಿಸುವವನು (2)
6. ಸಾಮಿಪ್ಯವನ್ನು ಸೂಚಿಸುವ ಪದ (3)
8. ಪುರಾಣದಲ್ಲಿ ಸುರವಿರೋಧಿಗಳೆಂದು ಚಿತ್ರಿಸಿದವರು (3)
9. ಸ್ಮಶಾನದ ತದ್ಭವರೂಪ (3)
10. ಸಾಧನೆಗಾಗಿ ಹಾಕಿಕೊಳ್ಳುವ ನಿರ್ಧಾರ ತಲೆಕೆಳಗಾಗಿದೆ (2)
11. ಕೋಟೆ ಸುತ್ತಲಿನ ನೀರು ತುಂಬಿದ ಸ್ಥಳ (3)

ಹಿಂದಿನ ಸಂಚಿಕೆ ಉತ್ತರ

ಎಡದಿಂದ ಬಲಕ್ಕೆ : 1.ಸಾರಸ 5.ಶಬರ 6.ಬಹಳ 8.ಸಕಾಲ 10.ಗುಡುಗು 12.ಸಂಗಡ 13.ರುದಿತ 14.ಸಜಾತಿ

ಮೇಲಿನಿಂದ ಕೆಳಕ್ಕೆ : 2.ಸರಳ 3.ಸಶಸ್ತ್ರ 4.ದುರ್ಬಲ 7.ಹರಡು 9.ಕಾಳಗ 10.ಗುಬ್ಬಚ್ಚಿ 11.ಗುರುತು 12.ಸಂತಸ

ಸಮಾಜಕ್ಕೆ ಅಂಟಿದ ಗೆದ್ದಲು ಬಿಡುವುದು ಯಾವಾಗ ?

ಆಧುನಿಕ ಭಾರತದ ಪಿತಾಮಹ ಎಂದೇ ಜನಪ್ರಿಯರಾದ ರಾಜಾರಾಮ್ ಮೋಹನರಾಯ್ ಅವರು ಸತಿ ಪದ್ಧತಿ ಪಿಡುಗಿನ ವಿರುದ್ಧದ ಹೋರಾಟ ಅಮೋಘವಾಗಿತ್ತು. ಸತಿ ಸಹಗಮನ ಪದ್ಧತಿ ಹೆಸರಲ್ಲಿ ಅಮಾಯಕ ಹೆಣ್ಣು ಮಕ್ಕಳ ಜೀವ ಬಲಿ ಪಡೆಯುವ, ಬದುಕುವ ಹಕ್ಕು ಕಸಿಯುವ ಹುನ್ನಾರದ ನೈಜ ಚಿತ್ರಣ ಬಯಲಿಗೆಳೆದು ಅದಕ್ಕೆ ಔಷಧಿ ಅರೆದ ಮಹನೀಯ ಅವರು. ರಾಜಾರಾಮ್ ಮೋಹನರಾಯ್ ಅವರು ಸತಿ ಪದ್ಧತಿಯಂತಹ ಕ್ರೂರ ವ್ಯವಸ್ಥೆಯನ್ನು ಬ್ರಹ್ಮ ಸಮಾಜದ ಮೂಲಕ ಹೋಗಲಾಡಿಸಿದರೆ, ಸಾವಿತ್ರಿಬಾಯಿ ಮತ್ತು ಜ್ಯೋತಿಬಾ ಪುಲೆ ದಂಪತಿಗಳು ಶೋಷಿತರ ಮತ್ತು ಮಹಿಳೆಯರ ಶಿಕ್ಷಣಕ್ಕಾಗಿ ಅಡಿಪಾಯ ಹಾಕಿದರು. ಈಶ್ವರಚಂದ್ರ ವಿದ್ಯಾಸಾಗರ ಅವರು ವಿಧವಾ ಪುನರ್ವಿವಾಹಕ್ಕಾಗಿ ಶ್ರಮಿಸಿ ಸ್ತ್ರೀಯರ ಬಾಳಿನಲ್ಲಿ ಹೊಸ ಬೆಳಕು ತಂದರು.

ಸ್ವಾಮಿ ವಿವೇಕಾನಂದರು ಯುವಜನತೆಯಲ್ಲಿ ಆತ್ಮವಿಶ್ವಾಸ ತುಂಬಿ 'ಮಾನವ ಸೇವೆಯೇ ಈಶ ಸೇವೆ' ಎಂದು ಸಾರಿದರು. ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂತಿರುಗಿ' ಎಂಬ ಕರೆ ನೀಡಿ ಬಾಲ್ಯವಿವಾಹ ಮತ್ತು ಮೂಢನಂಬಿಕೆಗಳನ್ನು ವಿರೋಧಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ದಲಿತರು ಮತ್ತು ಶೋಷಿತರಿಗೆ ಸಾಮಾಜಿಕ ಸಮಾನತೆ ಹಾಗೂ ಹಕ್ಕುಗಳನ್ನು ಒದಗಿಸಿಕೊಟ್ಟರು. ಇನ್ನು 12ನೇ ಶತಮಾನದಲ್ಲೇ ಬಸವಣ್ಣನವರು 'ಕಾಯಕವೇ ಕೈಲಾಸ' ಮತ್ತು 'ಅನುಭವ ಮಂಟಪ'ದ ಮೂಲಕ ಸಮಾನತೆ ಹಾಗೂ ವಿಚಾರ ಸ್ವಾತಂತ್ರ್ಯದ ಕ್ರಾಂತಿ ಮಾಡಿದರು.

ಶತಮಾನಗಳಿಂದ ಸುಧಾರಕರು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಆದರೆ, ಇಂದು ನಾವು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಬದಲು ಕೇವಲ ಪ್ರದರ್ಶನಕ್ಕೆ (Show-off) ಸೀಮಿತಗೊಳಿಸುತ್ತಿರುವುದು ವಿಷಾದನೀಯ.

ಜಯಂತಿಗಳು, ಮೆರವಣಿಗೆಗಳು ಮತ್ತು ಸಾಮಾಜಿಕ ಜಾಲತಾಣದ ಸ್ಟೇಟಸ್‌ಗಳು ಕೇವಲ ಆಚರಣೆಯಾಗುತ್ತಿವೆಯೇ ಹೊರತು ಅನುಷ್ಠಾನವಾಗುತ್ತಿಲ್ಲ. 'ಹೇಳುವುದು ಶಾಸ್ತ್ರ, ತಿನ್ನುವುದು ಬದನೆಕಾಯಿ' ಎಂಬಂತೆ ಅವರ ತತ್ವಗಳು ಪುಸ್ತಕಕ್ಕೆ ಮಾತ್ರ ಸೀಮಿತವಾಗಿವೆ.

ಇಂದಿಗೂ ಲೈಂಗಿಕ ದೌರ್ಜನ್ಯ, ವರದಕ್ಷಿಣೆ, ಆರ್ಥಿಕ ಅಸಮಾನತೆಯಂತಹ ಗೆದ್ದಲುಗಳು ಸಮಾಜವನ್ನು ಕಾಡುತ್ತಿವೆ. ಈ ಮಹಾನ್ ಚೇತನಗಳ ಹೋರಾಟಕ್ಕೆ ನಿಜವಾದ ಅರ್ಥ ಸಿಗಬೇಕೆಂದರೆ: ಅವರ ತತ್ವಗಳನ್ನು ಕೇವಲ ಓದದೆ, ದೈನಂದಿನ ಜೀವನದಲ್ಲಿ ಕಾರ್ಯರೂಪಕ್ಕೆ ತರಬೇಕು. ಶೋಷಣೆಮುಕ್ತ ಸಮಾಜ ನಿರ್ಮಾಣದ ಮೂಲಕ ಗಾಂಧೀಜಿಯವರ 'ರಾಮರಾಜ್ಯ'ದ ಕನಸನ್ನು ನನಸು ಮಾಡಬೇಕು. ತೋರ್ಪಡಿಕೆಯ ಆಚರಣೆಗಳನ್ನು ಬಿಟ್ಟು, ಆಂತರಿಕ ಬದಲಾವಣೆಗೆ ಒತ್ತು ನೀಡಬೇಕು. ಸಮಾಜ ಸುಧಾರಕರ ಪರಿಶ್ರಮಕ್ಕೆ ಬೆಲೆ ತರುವುದು ಮತ್ತು ಆದರ್ಶ ಸಮಾಜ ನಿರ್ಮಿಸುವುದು ನಮ್ಮೆಲ್ಲರ ನೈತಿಕ ಜವಾಬ್ದಾರಿಯಾಗಿದೆ.

▪ ಸಿದ್ದಣ್ಣ ಸಿ. ವಾಡೇದ

ಸಾಮಾನ್ಯ ಮಾದರಿ ಪ್ರಶ್ನೋತ್ತರ

86.ಈ ಕೆಳಕಂಡವುಗಳಲ್ಲಿ ಯಾವುದು ಭಾರತದ ಪ್ರಥಮ ರಾಷ್ಟ್ರೀಯ ಉದ್ಯಾನವಾಗಿದೆ?
ಎ) ಸುಂದರಬನ ಬಿ) ಜಿಮ್ ಕಾರ್ಬೆಟ್
ಸಿ) ನಾಗರಹೊಳೆ ಡಿ) ಬಂಡೀಪುರ

87. ಭಾರತದಲ್ಲಿ ಮೊಟ್ಟಮೊದಲಿಗೆ ಜೀವಿ ಸಂರಕ್ಷಣಾ ವಲಯವು ನೀಲಿಗಿರಿ ಸರಣಿಯಲ್ಲಿ ಯಾವಾಗ ಅಸ್ತಿತ್ವಕ್ಕೆ ಬಂದಿತು?
ಎ) 1985 ಬಿ) 1986
ಸಿ) 1990 ಡಿ) 1958

88. ಹೆಚ್ಚಾಗಿ ನದಿ ಮುಖಜ ಭೂಮಿಗಳಲ್ಲಿ ಯಾವ ವಿಧದ ಅರಣ್ಯಗಳು ಕಂಡುಬರುತ್ತವೆ?
ಎ) ಉಷ್ಣವಲಯದ ಎಲೆ ಉದುರಿಸುವ ಕಾಡುಗಳು ಬಿ) ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳು
ಸಿ) ಮ್ಯಾಂಗ್ರೋವ್ ಕಾಡುಗಳು ಡಿ) ಹುಲ್ಲುಗಾವಲು

89. ಬಾಂಗ್ಲಾದೇಶದಲ್ಲಿ ಬ್ರಹ್ಮಪುತ್ರ ನದಿಯನ್ನು ಏನೆಂದು ಕರೆಯುವರು?
ಎ) ಸಾಂಗ್ ಪೊ ಬಿ) ಯಮುನಾ
ಸಿ) ಚೆಮ್‌ಯಂಗ್‌ಡಂಗ್ ಡಿ) ಮೇಲಿನ ಯಾವುದೂ ಅಲ್ಲ

90. ಬ್ರಹ್ಮಪುತ್ರನದಿಯು ಟಿಬೆಟ್‌ನಲ್ಲಿ ಉಗಮವಾಗಿ ಆರಂಭದಲ್ಲಿ ಪೂರ್ವಾಭಿಮುಖವಾಗಿ ಹರಿದು ಈ ಕೆಳಕಂಡ ಯಾವ ರಾಜ್ಯದ ಮೂಲಕ ಭಾರತವನ್ನು ಪ್ರವೇಶಿಸುತ್ತದೆ?
ಎ) ಅಸ್ಸಾಂ ಬಿ) ಅರುಣಾಚಲ ಪ್ರದೇಶ
ಸಿ) ಜಮ್ಮು ಕಾಶ್ಮೀರ ಡಿ) ಸಿಕ್ಕಿಂ

91. ಈ ಕೆಳಗಿನವುಗಳಲ್ಲಿ ಯಾವುದು ದಕ್ಷಿಣ ಭಾರತದ ನದಿಗಳಾಗಿವೆ?
1) ಮಹಾನದಿ 2) ಗೋದಾವರಿ, ನರ್ಮದಾ
3) ಕೃಷ್ಣಾ, ಕಾವೇರಿ 4) ತಾಪಿ
ಆಯ್ಕೆಗಳು:
ಎ) 1 ಮತ್ತು 3 ಬಿ) 2 ಮತ್ತು 3
ಸಿ) 1, 2, 3 ಡಿ) 1, 2, 3, 4

92. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಾಣಿಕೆಯಾಗಿದೆ?
ಎ) ಮಹಾನದಿ – ಸಿವಾಹ ಬಿ) ಗೋದಾವರಿ –ತ್ರಯಂಬಕ
ಸಿ) ಕೃಷ್ಣ ನದಿ – ಮಹಾಬಲೇಶ್ವರ ಡಿ) ಮೇಲಿನ ಎಲ್ಲವೂ

ಮುಂದುವರಿಯುತ್ತದೆ...

ಉತ್ತರಗಳು: 86–ಬಿ, 87–ಬಿ, 88–ಸಿ, 89–ಬಿ, 90–ಬಿ, 91–ಡಿ, 92–ಡಿ.

ಚಾಣಕ್ಯ ಕರಿಯರ್ ಅಕಾಡೆಮಿ, ವಿಜಯಪುರ. ಫೋನ್ ನಂ: 9880957562, 08352–222197

ರಾಜ್ಯ ಮತ್ತು ಕೇಂದ್ರ ಸರ್ಕಾರಿ ಪರೀಕ್ಷೆ - ಪ್ರಚಲಿತ ಘಟನೆಗಳು

6. 'ಭಾರತ್ ಸೇವಾ ಕೇಂದ್ರವು' ಯಾವ ಸಂಸ್ಥೆಯಿಂದ ಪ್ರಾರಂಭಿಸಲ್ಪಟ್ಟ ರಾಷ್ಟ್ರವ್ಯಾಪಿ ಉಪಕ್ರಮವಾಗಿದೆ?
[ಎ] ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ (ಸಿಸಿಐ) [ಬಿ] ನೀತಿ ಆಯೋಗ
[ಸಿ] ಭಾರತೀಯ ರಿಸರ್ವ್ ಬ್ಯಾಂಕ್ [ಡಿ] ಗ್ರಾಮೀಣಾಭಿವೃದ್ಧಿ ಸಚಿವಾಲಯ

7. ಇತ್ತೀಚೆಗೆ ಸುದ್ದಿಯಲ್ಲಿ ಕಾಣಿಸಿಕೊಂಡ 'ಪರಸ್ನಾಥ್ ಬೆಟ್ಟವು' ಯಾವ ರಾಜ್ಯದಲ್ಲಿದೆ?
[ಎ] ಜಾರ್ಖಂಡ್ [ಬಿ] ಮಧ್ಯ ಪ್ರದೇಶ
[ಸಿ] ಒಡಿಶಾ [ಡಿ] ಮಹಾರಾಷ್ಟ್ರ

8. 'ಮಲ್ಟಿ ಏಜೆನ್ಸಿ ಸೆಂಟರ್ (MAC)' ಯಾವ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ?
[ಎ] ಗುಪ್ತಚರ ದಳ (ಐಬಿ)
[ಬಿ] ಕೇಂದ್ರ ತನಿಖಾ ದಳ (ಸಿಬಿಐ)
[ಸಿ] ರಾಷ್ಟ್ರದ ತನಿಖಾ ಸಂಸ್ಥೆ (ಎನ್‌ಐಎ)
[ಡಿ] ಸಂಶೋಧನೆ ಮತ್ತು ವಿಶ್ಲೇಷಣಾ ವಿಭಾಗ (ರಾ)

9. ಆಡಳಿತ ಮತ್ತು ಕಾನೂನು ಜಾರಿಯನ್ನು ಸುಧಾರಿಸಲು ಯಾವ ರಾಜ್ಯ ಸರ್ಕಾರ ಇತ್ತೀಚೆಗೆ 'ಸೈಬರ್ ಅಪರಾಧ ಮರುಪಾವತಿ ಪೋರ್ಟಲ್' ಮತ್ತು 'ಐ–ಪ್ರಗತಿಯನ್ನು' ಪ್ರಾರಂಭಿಸಿತು?
[ಎ] ಗುಜರಾತ್ [ಬಿ] ಮಧ್ಯಪ್ರದೇಶ
[ಸಿ] ಒಡಿಶಾ [ಡಿ] ಬಿಹಾರ

10. ಭಾರತದ ಮೊದಲ ಟ್ರಾನ್ಸ್‌ಮೀಡಿಯಾ ಮನರಂಜನಾ ನಗರ 'ಕ್ರಿಯೇಟರ್ ಲ್ಯಾಂಡ್' ಅನ್ನು ಯಾವ ರಾಜ್ಯ ಸರ್ಕಾರ ಪ್ರಾರಂಭಿಸಿದೆ?
[ಎ] ಮಹಾರಾಷ್ಟ್ರ [ಬಿ] ಆಂಧ್ರ ಪ್ರದೇಶ
[ಸಿ] ಕರ್ನಾಟಕ [ಡಿ] ತಮಿಳುನಾಡು

11. ಅಯೋನಿಯನ್ ದ್ವೀಪಗಳು ಯಾವ ದೇಶದಲ್ಲಿವೆ?
[ಎ] ಇಂಡೋನೇಷ್ಯಾ [ಬಿ] ನ್ಯೂಜಿಲೆಂಡ್
[ಸಿ] ಆಸ್ಟ್ರೇಲಿಯಾ [ಡಿ] ಗ್ರೀಸ್

12. ಟುಟಿ ದ್ವೀಪವು ಯಾವ ದೇಶದಲ್ಲಿದೆ?
[ಎ] ಇಂಡೋನೇಷ್ಯಾ [ಬಿ] ಮಾರಿಷಸ್
[ಸಿ] ಸುಡಾನ್ [ಡಿ] ಭಾರತ

ಮುಂದುವರಿಯುತ್ತದೆ...

ಉತ್ತರಗಳು: 6– ಎ, 7–ಎ, 8–ಎ, 9–ಎ, 10–ಬಿ, 11–ಡಿ, 12– ಸಿ.

ಮಹೇಶ ಪಟ್ಟೇದ್, ನೂತನ ಅಕಾಡೆಮಿ, ಕೊಪ್ಪಳ. ಮೊ: 96201 39001

NEET/JEE/KCET CLASSES

7. A position dependent force $\vec{F} = (7 - 2x + 3x^2)\,N$ acts on a small abject of mass 2 kg to displace it from $x = 0$ to $x = 5m$. The work done in joule is
(1) 70 J (2) 270 J (3) 35 JB (4) 135 J

Sol. 4 Work done

$$= \int_{x_1}^{x_2} F\,dx = \int_0^5 (7 - 2x + 3x^2)\,dx = [7x - x^2 + x^3]_0^5 = 35 - 25 + 125 = 135\,J$$

8. A particle of mass 0.5 kg is displaced from position $\vec{r}_1$ (2, 3, 1) to $\vec{r}_2$ (4, 3, 2) by applying a force of magnitude 30 N which is acting along $(\hat{i}+\hat{j}+\hat{k})$. The work done by the force is –
(1) $10\sqrt{3}$ J (2) $30\sqrt{3}$ J (3) 30 J (4)None of these

Ans: 2)

Sol. $\therefore\ \vec{F} = F.\ \hat{f} = 30\left(\frac{\hat{i}+\hat{j}+\hat{k}}{\sqrt{3}}\right)$

$\vec{F} = 10\sqrt{3}\ (\hat{i}+\hat{j}+\hat{k})$ .... (1)

and $\vec{S} = \vec{r_2} - \vec{r_1} = 2\hat{i}+\hat{k}$ ..... (2)

$\therefore\ W = \vec{F}.\vec{S} = 30\sqrt{3}$ J

Continued...

Shankreppa Hosadoddi, Physics Lecture Kalaburagi. **Mob- 99025 69194**

IAS/KAS Coaching Subject : General Mental Ability

Read the below passage and answer the questions (1 - 3)

He was also part of the planning for the 2016 surgical strikes, in which the Indian Army went across the Line of Control into Pakistan-occupied Kashmir. Rawat, it was reported, was monitoring the developments from South Block in New Delhi. During his service, General Rawat had been decorated with the Param Vishisht Seva Medal, Uttam Yudh Seva Medal, Ati Vishisht Seva Medal, Vishisht Seva Medal, Yudh Seva Medal, and Sena Medal.

1.Where was the Late General Bipin Rawat born?
A.Giridih , Jharkhand B.South Delhi
C.Srinagar, Jammu and Kashmir D.Pauri, Uttarakhand
Answer : D
Explanation :
According to the passage
● He was born in Pauri, Uttarakhand on March 16, 1958.

2. Which of the below were Late General Rawat's military achievements?
A.Reducing militancy in the north east
B.Planning for the surgical strikes in 2016
C.Being Commander of a multinational brigade in the Democratic Republic of Congo
D.All of the above
Answer : D
Explanation :
●All the above are mentioned in the passage.

3. When did late General Rawat join the army?
A.1966 B.1978 C.1976 D.1977
Answer : B
Explanation :
According to the passage,
●Rawat was commissioned into the Indian Army in December 1978 in the same unit as his father.

Continued...

Universal Coaching Centre, Vijayanagar, Bangalore. **Ph No: 080 2339 6403**

ಮಾನಸಿಕ ಸಾಮರ್ಥ್ಯ

3) 38, 36, 32, 30, 26, 24, ?

ಎ. 24 ಬಿ. 20 ಸಿ. 18 ಡಿ. 16

ಉತ್ತರ : ಬಿ. 20

ವಿವರಣೆ: ಈ ಸರಣಿಯಲ್ಲಿರುವ ಅಂಕಿಗಳ ನಡುವಿನ ವ್ಯತ್ಯಾಸವನ್ನು ಮೊದಲು ಗುರುತಿಸೋಣ.



ಮೇಲಿನ ಸರಣಿಯಲ್ಲಿರುವ ಅಂಕಿಗಳ ನಡುವಿನ ವ್ಯತ್ಯಾಸವು 2 ಮತ್ತು 4 ರ ಅಂತರದಲ್ಲಿದೆ, ಅಲ್ಲದೇ ಇಲ್ಲಿ ಇನ್ನೊಂದು ವಿಚಾರವನ್ನು ಗಮನಿಸಬೇಕು ಅದೇನೆಂದರೆ 2,4 ರ ಅಂತರವನ್ನು ಸರಣಿ ಸಂಖ್ಯೆಯ ಪ್ರತಿಯೊಂದು ಸಂಖ್ಯೆಯಿಂದ ಕಳೆದಿರುವುದು ತಿಳಿಯುತ್ತದೆ, ಅದೇ ವಿಧಾನವನ್ನು ಮುಂದುವರಿಸಿದರೆ ಸಂಖ್ಯೆ 24 ರಿಂದ 4ನ್ನು ಕಳೆದರೆ ಬರುವ **ಸಂಖ್ಯೆ 20**.

4) 5, 24, 61, 122, 213, 340, ?

ಎ. 509 ಬಿ. 508 ಸಿ. 510 ಡಿ. 506

ಉತ್ತರ : ಎ. 509

ವಿವರಣೆ: ಇಲ್ಲಿ ಪ್ರತಿಯೊಂದು ಸಂಖ್ಯೆಯ ವಿಶೇಷತೆಯನ್ನು ಗಮನಿಸಿದಾಗ, ಈ ಸಂಖ್ಯೆಗಳು ಸ್ವಾಭಾವಿಕ ಸಂಖ್ಯೆಗಳ ಘನಸಂಖ್ಯೆಗಳಲ್ಲಿ ಸಂಖ್ಯೆ 3ನ್ನು ಕಳೆದಿರುವುದು ತಿಳಿಯುತ್ತದೆ.
ಅಂದರೆ,

$2^3=8-3=5$, $3^3=27-3=24$, $4^3=64-3=61$, $5^3=125-3=122$, $6^3=216-3=213$, $7^3=343-3=340$

ನೋಡಿ ಎಷ್ಟು ಸುಲಭವಾಗಿದೆ, ಹೌದು ಹೀಗೆ ಮುಂದುವರಿದರೆ ಸಂಖ್ಯೆ 7ರ ನಂತರದ ಸ್ವಾಭಾವಿಕ ಸಂಖ್ಯೆ 8 ಆಗಿದ್ದು. 8ರ ಘನಸಂಖ್ಯೆ 512(83=512)ರಲ್ಲಿ ಸಂಖ್ಯೆ 3ನ್ನು ಕಳೆದರೆ 509 (83=512–3=509) ಆಗುತ್ತದೆ.

5) 2, 7, 14, 23, 34, 47, ?

ಎ. 63 ಬಿ. 60 ಸಿ. 61 ಡಿ. 62

ಉತ್ತರ : ಡಿ. 62

ವಿವರಣೆ : ಈ ಸಂಖ್ಯೆಗಳು ಸ್ವಾಭಾವಿಕ ಸಂಖ್ಯೆಗಳ ವರ್ಗಸಂಖ್ಯೆಗಳಲ್ಲಿ ಸಂಖ್ಯೆ 2 ನ್ನು ಕಳೆದಿದ್ದಾರೆ. ಹೇಗೆಂದರೆ,

$2^2=4-2=2$, $3^2=9-2=7$, $4^2=16-2=14$, $5^2=25-2=23$, $6^2=36-2=34$, $7^2=49-2=47$.

ನೋಡಿ ಎಷ್ಟು ಸರಳವಾಗಿದೆ, ಹೀಗೆ ಸಂಖ್ಯಾ ಸರಣಿಯನ್ನು ಮುಂದುವರಿಸಿದರೆ ಸಂಖ್ಯೆ 7ರ ನಂತರದ ಸಂಖ್ಯೆ 8. 8ರ ವರ್ಗ ಸಂಖ್ಯೆ 64 (82=64)ರಲ್ಲಿ ಸಂಖ್ಯೆ 2ನ್ನು ಕಳೆದರೆ, ಬರುವ **ಸಂಖ್ಯೆ 62.(82=64–2=62)**.

ಮುಂದುವರಿಯುತ್ತದೆ...

JICE IAS ACADEMY SUCCESS ASSURED BENGALURU, Mob- 76761 67901

PSI/CAR/Civil Police Constable

16. NGT ರಚನೆಯ ಕುರಿತು, ಈ ಕೆಳಗಿನ ಯಾವ ಹೇಳಿಕೆಗಳು ತಪ್ಪಾಗಿದೆ?

ಎ) ಎಲ್ಲಾ ನ್ಯಾಯಾಂಗ ಸದಸ್ಯರು, ಅಧ್ಯಕ್ಷರು ಸೇರಿದಂತೆ ಪರಿಣಿತ ಸದಸ್ಯರು, 3 ವರ್ಷ ಅಥವಾ 65 ವರ್ಷಗಳ ಅವಧಿಯನ್ನು ಹೊಂದಿರುತ್ತಾರೆ.
ಬಿ) ಭಾರತದ ಮುಖ್ಯ ನ್ಯಾಯಮೂರ್ತಿ (CJI) ರೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ಅಧ್ಯಕ್ಷರನ್ನು ನೇಮಿಸುತ್ತಾರೆ.
ಸಿ) ನ್ಯಾಯಾಂಗ ಸದಸ್ಯರು ಮತ್ತು ಪರಿಣಿತ ಸದಸ್ಯರನ್ನು ನೇಮಿಸಲು ಪರಿಸರ ಸಚಿವಾಲಯವು ಆಯ್ಕೆ ಸಮಿತಿಯನ್ನು ರಚಿಸುತ್ತದೆ.
ಡಿ) ನ್ಯಾಯಮಂಡಳಿಯಲ್ಲಿ ಕನಿಷ್ಠ 10 ಮತ್ತು ಗರಿಷ್ಠ 20 ಪೂರ್ಣ ಸಮಯದ ನ್ಯಾಯಾಂಗ ಸದಸ್ಯರು ಮತ್ತು ಪರಿಣಿತ ಸದಸ್ಯರು ಇರಬೇಕು.

17. ಸ್ಟಾಕ್ ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ, ಅವುಗಳ ಸ್ಟಾಕ್ ಬದಲಾವಣೆಗಳೊಂದಿಗೆ ಈ ಕೆಳಗಿನ ಯಾವ ನಿಯಮಗಳು ಸರಿಯಾಗಿವೆ?

ಎ) ಕರಡಿ ಮಾರುಕಟ್ಟೆ – ಹೆಚ್ಚುತ್ತಿರುವ ಷೇರುಗಳು
ಬಿ) ಬುಲ್ ಮಾರುಕಟ್ಟೆ – ಇಳಿಕೆಯಾಗುತ್ತಿರುವ ಷೇರುಗಳು
ಸಿ) ಎರಡೂ ತಪ್ಪಾಗಿವೆ
ಡಿ) ಎರಡೂ ಸರಿಯಾಗಿವೆ

18. 1967ರ 21ನೇ ಸಂವಿಧಾನಿಕ ತಿದ್ದುಪಡಿ ಕಾಯ್ದೆಯ ಮೂಲಕ ಈ ಕೆಳಗಿನ ಯಾವ ಭಾಷೆಗಳನ್ನು ಸೇರಿಸಲಾಗಿದೆ?

ಎ) ಕೊಂಕಣಿ ಬಿ) ಮಣಿಪುರಿ
ಸಿ) ನೇಪಾಳ ಡಿ) ಸಿಂಧಿ

19. ಮನಿ ಬಿಲ್‌ಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

1) ವಿಧಿ 110 (1) (a) ನಿಂದ (g) ವರೆಗೆ ನಿರ್ದಿಷ್ಟ ಪಡಿಸಿದ ವಿಷಯಗಳೊಂದಿಗೆ ವ್ಯವಹರಿಸಿದರೆ ಬಿಲ್ ಅನ್ನು ಮನಿಬಿಲ್ ಎಂದು ಪರಿಗಣಿಸಲಾಗುತ್ತದೆ.
2) ಮಸೂದೆಯು ಮನಿ ಬಿಲ್ ಆಗಿದೆಯೇ ಅಥವಾ ಇಲ್ಲವೇ ಎಂಬುದರ ಕುರಿತು ಲೋಕಸಭೆಯ ಸ್ಪೀಕರ್ ಅವರ ನಿರ್ಧಾರವು ಅಂತಿಮವಾಗಿರುತ್ತದೆ.
3) ವಿಧೇಯಕವು ಮನಿ ಬಿಲ್ ಆಗಿದೆಯೇ ಎಂಬುದರ ಕುರಿತು ಸ್ಪೀಕರ್ ನಿರ್ಧಾರವು ನ್ಯಾಯಾಂಗ ಪರಿಶೀಲನೆಗೆ ಒಳಪಟ್ಟಿರುತ್ತದೆ

ಆಯ್ಕೆಗಳು

ಎ) 1 & 2 ಮಾತ್ರ ಬಿ) 2 & 3 ಮಾತ್ರ
ಸಿ) 1 & 3 ಮಾತ್ರ ಡಿ) 1, 2 & 3 ಮಾತ್ರ

ಮುಂದುವರಿಯುತ್ತದೆ...

Answers 16–ಸಿ, 7–ಸಿ, 18–ಡಿ, 19–ಎ.

ಪಾಟೀಲ್ಸ್ ಗುರುಕುಲ ಕರಿಯರ್ ಅಕಾಡೆಮಿ, ಧಾರವಾಡ. ಮೊ: 98804 17024

ಭೂಗೋಳಶಾಸ್ತ್ರ

334) ರಾಯಚೂರು ದೋ–ಆಬ್ ಎಂಬುದು ಈ ಕೆಳಗಿನ ಯಾವ ನದಿಗಳ ನಡುವೆ ಇದೆ?

a) ಕಾವೇರಿ ಮತ್ತು ಕೃಷ್ಣಾ b) ಮಲಪ್ರಭಾ ಮತ್ತು ಘಟಪ್ರಭಾ
c) ಕೃಷ್ಣಾ ಮತ್ತು ತುಂಗಭದ್ರಾ d) ಗೋದಾವರಿ ಮತ್ತು ನರ್ಮದಾ

ಉತ್ತರ: c

ಸೌರವ್ಯೂಹದ ಪ್ರಶ್ನೆಗಳು (ಪರಿಷ್ಕೃತ)

335) ಸೂರ್ಯನಿಗೆ ಅತ್ಯಂತ ಸಮೀಪವಿರುವ ಗ್ರಹ ಯಾವುದು?

ಉತ್ತರ: ಬುಧ

ಸೌರವ್ಯೂಹದಲ್ಲಿ ಸೂರ್ಯನಿಗೆ ಅತಿ ಹತ್ತಿರದ ಗ್ರಹವೆಂದರೆ ಬುಧ. ಶುಕ್ರ ಗ್ರಹವು ಎರಡನೇ ಸ್ಥಾನದಲ್ಲಿದೆ, ಭೂಮಿಯು ಮೂರನೇ ಸ್ಥಾನದಲ್ಲಿದೆ ಮತ್ತು ಮಂಗಳ ಗ್ರಹವು ನಾಲ್ಕನೇ ಸ್ಥಾನದಲ್ಲಿದೆ.

336) ಸೂರ್ಯನಿಂದ ಅತಿ ದೂರದಲ್ಲಿರುವ ಗ್ರಹ ಯಾವುದು?

ಉತ್ತರ: ನೆಪ್ಚೂನ್

ಸೌರವ್ಯೂಹದಲ್ಲಿ ಸೂರ್ಯನಿಂದ ಅತಿ ದೂರದ ಗ್ರಹವೆಂದರೆ ನೆಪ್ಚೂನ್. ಇದು ಎಂಟನೇ ಸ್ಥಾನದಲ್ಲಿದೆ. ಏಳನೇ ಸ್ಥಾನದಲ್ಲಿ ಯುರೇನಸ್, ಆರನೇ ಸ್ಥಾನದಲ್ಲಿ ಶನಿ ಮತ್ತು ಐದನೇ ಸ್ಥಾನದಲ್ಲಿ ಗುರು ಗ್ರಹ ಕಂಡುಬರುತ್ತವೆ.

337) 'ಮುಂಜಾನೆ ನಕ್ಷತ್ರ' ಮತ್ತು 'ಸಂಜೆಯ ನಕ್ಷತ್ರ' ಎಂದು ಯಾವ ಗ್ರಹವನ್ನು ಕರೆಯುತ್ತಾರೆ?

ಉತ್ತರ: ಶುಕ್ರ

ಶುಕ್ರ ಗ್ರಹವನ್ನು ಮುಂಜಾನೆಯ ನಕ್ಷತ್ರ, ಸಂಜೆಯ ನಕ್ಷತ್ರ ಹಾಗೂ 'ಬೆಳ್ಳಿ ಚುಕ್ಕಿ' ಎಂದು ಕರೆಯುವರು. ಏಕೆಂದರೆ ಇದು ಪೂರ್ವದಲ್ಲಿ ಸೂರ್ಯೋದಯಕ್ಕೆ ಮೊದಲು ಮತ್ತು ಪಶ್ಚಿಮದಲ್ಲಿ ಸೂರ್ಯಾಸ್ತದ ನಂತರ ಆಕಾಶದಲ್ಲಿ ಅತ್ಯಂತ ಪ್ರಕಾಶಮಾನವಾಗಿ ಕಾಣಿಸಿಕೊಳ್ಳುತ್ತದೆ.

338) ಶುಕ್ರ ಮತ್ತು ಮಂಗಳ ಗ್ರಹಗಳ ಕಕ್ಷೆಯ ನಡುವೆ ಕಂಡುಬರುವ ಗ್ರಹ ಯಾವುದು?

ಉತ್ತರ: ಭೂಮಿ

ಶುಕ್ರ ಮತ್ತು ಮಂಗಳ ಗ್ರಹಗಳ ನಡುವೆ ಭೂಮಿ ಇದೆ. ಭೂಮಿಯು ಸೂರ್ಯನಿಂದ ಮೂರನೇ ಸ್ಥಾನದಲ್ಲಿದ್ದು, ಸೌರವ್ಯೂಹದ ಐದನೇ ದೊಡ್ಡ ಗ್ರಹವಾಗಿದೆ. ಇದು ಜೀವಿಗಳನ್ನು ಒಳಗೊಂಡಿರುವ ಸೌರವ್ಯೂಹದ ಏಕೈಕ ವಿಶಿಷ್ಟ ಗ್ರಹ.

ಮುಂದುವರಿಯುತ್ತದೆ...

ಸಿದ್ದಲಿಂಗೇಶ್ವರ.ಮು. ಮುಳ್ಳಾಳ ಉಪನ್ಯಾಸಕರು, ಬೆಟಗೇರಿ–ಗದಗ ಮೊ: 9632808880

ಕೆ-ಸೆಟ್ ಸಾಮಾನ್ಯ ಪತ್ರಿಕೆ - ಬೋಧನಾ ಮತ್ತು ಸಂಶೋಧನಾ ಸಾಮರ್ಥ್ಯ

41. Which one of the following is correct?

A) (16)10 = (18)16 B) (10)10 = (10)8
C) (20)10 = (10100)2 D) (20)10 = (10110)2

ಈ ಕೆಳಗಿನವುಗಳಲ್ಲಿ ಯಾವುದು ಸರಿ?

ಎ) (16)10 = (18)16 ಬಿ) (10)10 = (10)8
ಸಿ) (20)10 = (10100)2 ಡಿ) (20)10 = (10110)2

42. Firewall means

A) A software program or a piece of hardware between computer and internet connection
B) A software program between printer and memory chip
C) A device to create fire on the wall
D) Virus

ಫೈರ್‌ವಾಲ್ ಎಂದರೆ

ಎ) ಗಣಕಯಂತ್ರ ಮತ್ತು ಇಂಟರ್ನೆಟ್ ನಡುವೆ ಇರುವ ಒಂದು ಸಾಫ್ಟ್‌ವೇರ್ ಪ್ರೋಗ್ರಾಮ್ ಅಥವಾ ತಂತ್ರಾಂಶ
ಬಿ) ಪ್ರಿಂಟರ್ ಮತ್ತು ಮೊಮೊರಿ ಚಿಪ್ ನಡುವೆ ಇರುವ ಒಂದು ಸಾಫ್ಟ್‌ವೇರ್ ಪ್ರೋಗ್ರಾಮ್
ಸಿ) ಗೋಡೆಯ ಮೇಲೆ ಬೆಂಕಿಯನ್ನು ರಚಿಸುವುದು
ಡಿ) ವೈರಸ್

Read the following passage carefully and answer the questions 43 to 48:

It was eleven O'clock when Mr. Pontellier returned from his night out. He was in an excellent humour, in high spirits, and very talkative. His entrance awoke his wife, who was in bed and fast asleep. He talked to her while he undressed, telling her anecdotes and bits of news and gossip that he had gathered during the day. She was overcome with sleep, and answered him with little half utterances.

He thought it very discouraging that his wife evinced so little interest in things which concerned him and valued so little his conversation. Mr. Pontellier had forgotten the bonbons and peanuts he had promised the boys. Not with standing, he loved them very much and went into the adjoining room where they slept to take a look at them and make sure that they were resting comfortably.

Mr. Pontellier returned to his wife with the information that Raoul had a high fever and needed looking after. Then he lit his cigar and went and sat near the open door to smoke Mrs. Pontellier was quite sure Raoul had no fever.

ಮುಂದುವರಿಯುತ್ತದೆ...

ಅರವಿಂದ್ ಇಂಡಿಯಾ, ವಿಜಯನಗರ, ಬೆಂಗಳೂರು. ಮೊ: 99864 39874

ಕದಿಯಲಾಗದ ಸಂಪತ್ತು ಎಂದರೆ ಅದುವೇ ಶಿಕ್ಷಣ

ನಾವು ಕಳೆದುಕೊಳ್ಳುವುದೇನು, ಉಳಿಸಿಕೊಳ್ಳುವುದೇನು?

■ ರುದ್ರಗೌಡ ಚ. ಪಾಟೀಲ
ಬೈಲಹೊಂಗಲ, ಬೆಳಗಾವಿ.

ನಮ್ಮ ಜೀವನದಲ್ಲಿ ನಾವು ಏನು ಸಂಗ್ರಹಿಸುತ್ತಿದ್ದೇವೆ? ಕಳೆದುಹೋಗುವ ವಸ್ತುಗಳನ್ನಾ, ಅಥವಾ ಸದಾ ಉಳಿಯುವ ಮೌಲ್ಯಗಳನ್ನಾ? ಒಂದು ಕ್ಷಣ ನಿಂತು ಯೋಚಿಸಿದರೆ, ಈ ಪ್ರಶ್ನೆ ಸುಲಭವಾಗಿ ತೋರುವುದಿಲ್ಲ. ಏಕೆಂದರೆ ನಮ್ಮ ದೈನಂದಿನ ಓಟದಲ್ಲಿ ನಾವು ಗಳಿಸುವುದು ಹೆಚ್ಚಾಗಿ ಕಾಣುತ್ತದೆಯೇ ಹೊರತು, ಉಳಿಯುವುದು ಎಷ್ಟು ಎಂಬುದನ್ನು ನಾವು ವಿಚಾರಿಸುವುದೇ ಕಡಿಮೆ.

ಒಂದು ದಿನ ಮನಸ್ಸಿನಲ್ಲಿ ಮೂಡಿದ ಒಂದು ಸಣ್ಣ ದೃಶ್ಯ, ಈ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಿತು. ಜೇನುನೊಣ ಸಣ್ಣದಾದ ಜೀವಿ, ಆದರೆ ಅದರ ಪರಿಶ್ರಮ ಅಪಾರ. ಹೂವಿನಿಂದ ಹೂವಿಗೆ ಹಾರುತ್ತಾ, ಪ್ರತಿಯೊಂದು ಹನಿ ಜೇನನ್ನೂ ಶ್ರಮದಿಂದ ಸಂಗ್ರಹಿಸುತ್ತದೆ. ದಿನಗಳು, ವಾರಗಳು, ತಿಂಗಳುಗಳು ಕಳೆದಂತೆ ಅದು ಕಟ್ಟುವ ಗೂಡು ಅದರ ಪರಿಶ್ರಮದ ಸಾಕ್ಷಿ. ಅದನ್ನು ನೋಡಿದಾಗ, 'ಪರಿಶ್ರಮದ ಸೌಂದರ್ಯ' ಎಂಬುದಕ್ಕೆ ಅರ್ಥ ಸಿಗುತ್ತದೆ.

ಆದರೆ, ಇದೇ ಕಥೆಗೆ ಇನ್ನೊಂದು ಮುಖವೂ ಇದೆ. ಯಾವುದೋ ಒಂದು ದಿನ, ಯಾರಾದರೂ ಬಂದು ಆ ಗೂಡನ್ನು ಒಡೆಯಬಹುದು, ಜೇನನ್ನು ತೆಗೆದುಕೊಂಡು ಹೋಗಬಹುದು. ಆಗ ಒಂದು ಪ್ರಶ್ನೆ ಮೂಡುತ್ತದೆ – ಅದರ ಪರಿಶ್ರಮ ವ್ಯರ್ಥವೇ? ಪಾಠ ಹೇಳುವ ಪ್ರಕೃತಿ, ಈ ಪ್ರಶ್ನೆಗೆ ಉತ್ತರವನ್ನು ಜೇನುನೊಣದ ಮೂಲಕವೇ ನೀಡುತ್ತದೆ:

'ಜೇನನ್ನು ಕದಿಯಬಹುದು; ಆದರೆ ಜೇನು ತಯಾರಿಸುವ ಕಲೆ ಅಥವಾ ಕೌಶಲ್ಯವನ್ನು ಯಾರೂ ಕದಿಯಲು ಸಾಧ್ಯವಿಲ್ಲ.' ಇದು ಕೇವಲ ಒಂದು ವಾಕ್ಯವಲ್ಲ; ಇದು ಜೀವನದ ಆಳವಾದ ಸತ್ಯ. ನಾವು ಕಳೆದುಕೊಳ್ಳಬಹುದಾದ ವಸ್ತುಗಳ ಹಿಂದೆ ಓಡುತ್ತೇವೆ. ಹಣ, ಆಸ್ತಿ, ಸ್ಥಾನಮಾನ – ಇವುಗಳೆಲ್ಲವೂ ಅನಿಶ್ಚಿತ. ಅವು ನಮ್ಮ ಕೈಯಲ್ಲಿ ಶಾಶ್ವತವಾಗಿ ಉಳಿಯುವುದಿಲ್ಲ. ಒಂದು ಸಂದರ್ಭ, ಒಂದು ಪರಿಸ್ಥಿತಿ ಅಥವಾ ಒಂದು ತಪ್ಪು ಇವೆಲ್ಲವನ್ನೂ ನಮ್ಮಿಂದ ದೂರ ಮಾಡಬಹುದು.

ಆದರೆ, ನಾವು ಗಳಿಸಿರುವ ವಿದ್ಯೆ? ನಾವು ಬೆಳೆಸಿಕೊಂಡಿರುವ ಕೌಶಲ್ಯ? ಅನುಭವಗಳಿಂದ ಬಂದ ಜ್ಞಾನ? ಇವು ನಮ್ಮೊಳಗೆ ನೆಲೆಸಿರುವ ಸಂಪತ್ತು. ಇವನ್ನು ಯಾರೂ ಕಸಿದುಕೊಳ್ಳಲಾರರು.

ವಿದ್ಯೆ: ಅಂಕಗಳಾಚೆಗಿನ ಅರ್ಥ

ಇಂದಿನ ಕಾಲದಲ್ಲಿ ಶಿಕ್ಷಣದ ಅರ್ಥವು ಕೇವಲ ಅಂಕಗಳಿಗೆ ಸೀಮಿತವಾಗುತ್ತಿದೆ. ಪರೀಕ್ಷೆಯ ಫಲಿತಾಂಶವೇ ವಿದ್ಯಾರ್ಥಿಯ ಮೌಲ್ಯವನ್ನು ನಿರ್ಧರಿಸುವಂತೆ ಕಾಣುತ್ತಿದೆ. ಆದರೆ, ನಿಜವಾದ ವಿದ್ಯೆ ಇದಕ್ಕಿಂತ ಬಹಳ ಹೆಚ್ಚಿನದು. ವಿದ್ಯೆ ಎಂದರೆ ಸಮಸ್ಯೆಗಳನ್ನು ಎದುರಿಸುವ ಧೈರ್ಯ, ವೈಫಲ್ಯದಿಂದ ಪಾಠ ಕಲಿಯುವ ಶಕ್ತಿ ಹಾಗೂ ನಿಷ್ಠೆಯಿಂದ ಕೆಲಸ ಮಾಡುವ ಮನೋಭಾವ. ಮಕ್ಕಳಿಗೆ ನಾವು ಕೊಡಬೇಕಾದ ದೊಡ್ಡ ಪಾಠವೆಂದರೆ – 'ಜೀವನವನ್ನು ಬದುಕುವ ಕಲೆ'. ಅವರು ಕೇವಲ 'ಓದುತ್ತಿರುವವರು' ಆಗದೆ, ವಿಷಯಗಳನ್ನು 'ಅರ್ಥಮಾಡಿಕೊಳ್ಳುವವರು' ಆಗಬೇಕು. ಅವರು ಕೇವಲ 'ಸಾಧನೆ ಮಾಡುವವರು' ಆಗದೆ, 'ಮೌಲ್ಯಗಳನ್ನು ಉಳಿಸುವವರು' ಆಗಬೇಕು.

ಸ್ವಾರ್ಥದಿಂದ ಪರೋಪಕಾರದತ್ತ

ಸ್ವಾರ್ಥ ಮಾನವ ಸ್ವಭಾವದ ಒಂದು ಭಾಗ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವುದು ತಪ್ಪಲ್ಲ. ಆದರೆ, ಜೀವನವನ್ನು ಕೇವಲ 'ನನ್ನದು' ಎಂಬ ಚೌಕಟ್ಟಿನಲ್ಲಿ ನೋಡಿದರೆ ಅದು ಸೀಮಿತವಾಗುತ್ತದೆ. ಬೇರೆಯವರಿಗಾಗಿ ಬದುಕುವ ಮನೋಭಾವ ಬೆಳೆದಾಗ ಮಾತ್ರ ಜೀವನದ ವ್ಯಾಪ್ತಿ ವಿಸ್ತರಿಸುತ್ತದೆ. ಅಲ್ಲಿಯೇ ಸಂತೋಷದ ನಿಜವಾದ ಅರ್ಥ ಅಡಗಿದೆ.

'ಸ್ವಾರ್ಥದಿಂದ ಬದುಕುವುದು ಜೀವನದ ಭಾಗ; ಪರೋಪಕಾರದಿಂದ ಬದುಕುವುದು ಜೀವನದ ಕಲೆ.' ಈ ಭಾವನೆ ವ್ಯಕ್ತಿಯನ್ನು ಮಾತ್ರವಲ್ಲದೆ ಸಮಾಜವನ್ನೂ ಬಲಪಡಿಸುತ್ತದೆ. ಜೇನುನೊಣ ತನ್ನ ಕೆಲಸವನ್ನು ನಿಲ್ಲಿಸುವುದಿಲ್ಲ. ಯಾರಾದರೂ ತನ್ನ ಜೇನನ್ನು ಕದಿಯಬಹುದು ಎಂಬ ಭಯದಿಂದ ಅದು ಹಿಂಜರಿಯುವುದಿಲ್ಲ. ಅದು ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಮುಂದುವರಿಸುತ್ತದೆ. ನಮಗೆ ಇದರಿಂದ ಒಂದು ಸ್ಪಷ್ಟ ಸಂದೇಶ ಸಿಗುತ್ತದೆ: ಪರಿಶ್ರಮವೇ ನಮ್ಮ ಶಕ್ತಿ, ಕೌಶಲ್ಯವೇ ನಮ್ಮ ಭದ್ರತೆ. ಫಲದ ಬಗ್ಗೆ ಆತಂಕಪಡದೆ ಕೆಲಸದ ಮೇಲೆ ಗಮನಹರಿಸಿದಾಗ ಮಾತ್ರ ನಿಜವಾದ ಯಶಸ್ಸು ಸಿಗುತ್ತದೆ.

ನಮ್ಮ ಆಯ್ಕೆ ಏನು?

ಇಂದು ನಮ್ಮ ಮುಂದೆ ಎರಡು ದಾರಿಗಳಿವೆ

ಕದಿಯಬಹುದಾದ ಸಂಪತ್ತಿನ ದಾರಿ.

ಕದಿಯಲಾಗದ ಸಂಪತ್ತಿನ ದಾರಿ.

ಮೊದಲ ದಾರಿ ತ್ವರಿತ ಆಕರ್ಷಣೆ ನೀಡಬಹುದು. ಆದರೆ ಎರಡನೇ ದಾರಿ ಶಾಶ್ವತ ಮೌಲ್ಯವನ್ನು ನೀಡುತ್ತದೆ. ವಿದ್ಯೆ, ಕೌಶಲ್ಯ ಮತ್ತು ಮೌಲ್ಯಗಳೇ ನಮ್ಮ ನಿಜವಾದ ಸಂಪತ್ತು. ಇವುಗಳನ್ನು ಯಾರೂ ಕಸಿದುಕೊಳ್ಳಲಾರರು. ಜೀವನದಲ್ಲಿ ಎಲ್ಲವನ್ನೂ ಕಾಪಾಡಿಕೊಳ್ಳಲು ಸಾಧ್ಯವಿಲ್ಲದಿರಬಹುದು, ಆದರೆ ನಮ್ಮ ವಿದ್ಯೆ, ಮೌಲ್ಯಗಳು ಮತ್ತು ಕೌಶಲ್ಯಗಳನ್ನು ನಾವು ಖಂಡಿತವಾಗಿಯೂ ಕಾಪಾಡಿಕೊಳ್ಳಬಹುದು. ಇವುಗಳೇ ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುವ ನಿಜವಾದ ಶಕ್ತಿ. ಕದಿಯಬಹುದಾದವುಗಳ ಹಿಂದೆ ಓಡುವುದನ್ನು ಬಿಟ್ಟು, ಕದಿಯಲಾಗದ ಸಂಪತ್ತನ್ನು ಬೆಳೆಸಿಕೊಳ್ಳೋಣ. ಅದೇ ಜೀವನದ ಸಾರ್ಥಕತೆ.

ಸಂಖ್ಯಾ ಗೋಪುರದ ಸೌಂದರ್ಯ

ಸರಳ ಪಾಠ

ಸಂಗಮೇಶ್ ಬಿರ್ಲಿ
90600 60300

ಮೋಜಿನ ಲೆಕ್ಕಗಳೊಂದಿಗೆ ಗಣಿತದಲ್ಲಿ ಸಂಖ್ಯಾಗೋಪುರವು ವಿಶಿಷ್ಟ ಸ್ಥಾನವನ್ನು ಹೊಂದಿದೆ. ಈ ಹಿಂದಿನ ಹಲವು ಸಂಚಿಕೆಗಳಲ್ಲಿ ಸಂಖ್ಯಾ ಗೋಪುರದ ವಿಶೇಷತೆಗಳನ್ನು ನೋಡುತ್ತಾ ಬಂದಿದ್ದೀರಿ. ಇಲ್ಲಿಯವರೆಗೆ ಕ್ರಮ ಸಂಖ್ಯೆ 1 ರಿಂದ 7ರ ವರೆಗಿನ ಸಂಖ್ಯೆಗಳನ್ನು ಅಂಕಿ 9ಕ್ಕೆ ಗುಣಿಸಿದಾಗ ಬರುವ ಗಣಲಬ್ಧದ ವಿಶೇಷತೆಯ ಜೊತೆ ಸಂಖ್ಯಾಗೋಪುರಗಳನ್ನು ತಿಳಿದಿದ್ದೀರಿ.

ಮುಂದುವರಿದು ಇಂದು ಅಂಕಿ 8 ನ್ನು ಅಂಕಿ 9 ಕ್ಕೆ ಗುಣಿಸುವುದು ಹಾಗೂ 9 ನ್ನು ಒಂದೊಂದಾಗಿ ಹೆಚ್ಚಿಸುತ್ತಾ ಹೋಗಿ ಗುಣಿಸಿದಾಗ ಬರುವ ಗುಣಲಬ್ಧದಲ್ಲಿನ ಅಂಕಿಗಳ ವಿಶೇಷತೆ ಹಾಗೂ ಸಂಖ್ಯಾ ಗೋಪುರದ ಮುಂದುವರಿದ ಭಾಗವನ್ನು ನೋಡೋಣ.

ಅಂಕಿ 8ನ್ನು ಅಂಕಿ 9ಕ್ಕೆ ಗುಣಿಸಿದಾಗ ಹಾಗೂ 9 ನ್ನು ಒಂದೊಂದಾಗಿ ಹೆಚ್ಚಿಸುತ್ತಾ ಹೋಗಿ ಗುಣಿಸಿದಾಗ ಬರುವ ಗುಣಲಬ್ಧದಲ್ಲಿನ ಅಂಕಿಗಳನ್ನು ಈಗ ಗಮನಿಸೋಣ

$$8\times9=72$$
$$8\times99=792$$
$$8\times999=7992$$
$$8\times99999=79992$$
$$8\times99999=799992$$
$$8\times999999=7999992$$
$$8\times9999999=79999992$$

ಮುಂದಿನವುಗಳನ್ನು ಪರೀಕ್ಷಿಸಿ.

ಇಲ್ಲಿನ ವಿಶೇಷತೆ ಎಂದರೆ ಪ್ರತಿ ಹಂತದಲ್ಲಿ ಅಂಕಿ 8 ಸ್ಥಿರವಾಗಿಟ್ಟು 9ನ್ನು ಒಂದೊಂದು ಹೆಚ್ಚಿಸುತ್ತಾ ಹೋದಂತೆ ಗುಣಲಬ್ಧದಲ್ಲಿ ಮೊದಲ ಅಂಕಿ 7 ಹಾಗೂ ಕೊನೆ ಅಂಕಿ 2 ಇರುವುದನ್ನು ಕಾಣುತ್ತೇವೆ. ಇವೆರಡರ ಮಧ್ಯದಲ್ಲಿ ಅಂಕಿ 9 ಮೇಲಿನಂತೆ ಒಂದೊಂದಾಗಿ ಹೆಚ್ಚುತ್ತಾ ಹೋಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಹೀಗೆ ನಮಗೊಂದು 8 ಮತ್ತು 9 ಅಂಕಿಗಳ ಗುಣಲಬ್ಧದ ಸಂಖ್ಯಾ ಗೋಪುರದ ಸುಂದರವಾದ ರಚನೆ ಸಿಗುತ್ತದೆ.

ಅದರಂತೆ ಅಂಕಿ 8 ನ್ನು ಒಂದೊಂದಾಗಿ ಹೆಚ್ಚಿಸುತ್ತಾ ಅಂಕಿ 9 ಕ್ಕೆ ಗುಣಿಸಿದಾಗ ಬರುವ ಗುಣಲಬ್ಧದಲ್ಲಿನ ಅಂಕಿಗಳನ್ನು ಈಗ ಗಮನಿಸೋಣ.

$$8\times9=72$$
$$88\times9=792$$
$$888\times9=7992$$
$$8888\times9=79992$$
$$88888\times9=799992$$
$$888888\times9=7999992$$
$$8888888\times9=79999992$$

ಮುಂದಿನವುಗಳನ್ನು ನೀವು ಪ್ರಯತ್ನಿಸಿ

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪ್ರತಿ ಹಂತದಲ್ಲಿ ಅಂಕಿ 8 ಒಂದೊಂದು ಹೆಚ್ಚಿಸುತ್ತಾ ಹೋಗಿ ಅಂಕಿ 9ಕ್ಕೆ ಗುಣಿಸಿದಾಗ ಬರುವ ಗುಣಲಬ್ಧದಲ್ಲಿ ಮೊದಲ ಅಂಕಿ 7, ಮತ್ತು ಕೊನೆಯ ಅಂಕಿ 2 ಬರುವುದು. ಇವುಗಳ ಮಧ್ಯದಲ್ಲಿ ಅಂಕಿ 9 ಮೇಲಿನಂತೆ ಒಂದೊಂದಾಗಿ ಹೆಚ್ಚುತ್ತಾ ಹೋಗಿರುವುದನ್ನು ಗಮನಿಸಿ. ಇದು 8 ಮತ್ತು 9 ಅಂಕಿಯ ಗುಣಲಬ್ಧದ ಸಂಖ್ಯಾ ಗೋಪುರದ ರಚನೆಯಾಗಿದೆ. ಮೇಲಿನ ಎರಡೂ ಗೋಪುರಗಳ ಹೋಲಿಕೆಯನ್ನು ಗಮನಿಸಿ.

ಮುಂದುವರಿಯುವುದು...

ವಿದ್ಯಾರ್ಥಿ ಜೀವನದಲ್ಲಿ ಕೌಶಲ್ಯಾಭಿವೃದ್ಧಿ

(ಭಾಗ-2)

ನಡವಳಿಕೆ ನಡೆ

ಧೀರೇಂದ್ರ ನಾಗರಹಳ್ಳಿ
n.dheerendra@gmail.com

- **ಸಮಯ ನಿರ್ವಹಣೆ:** ಸಮಯ ನಿರ್ವಹಣೆ ಎಂದರೆ ಅಧ್ಯಯನ, ಹವ್ಯಾಸ ಮತ್ತು ವಿಶ್ರಾಂತಿಯನ್ನು ಸಮತೋಲನದಲ್ಲಿರಿಸಿ, ಪರೀಕ್ಷಾ ತಯಾರಿ ಹಾಗೂ ಪ್ರಾಜೆಕ್ಟ್ ಸಲ್ಲಿಕೆಯನ್ನು ನಿಗದಿತ ಸಮಯಕ್ಕೆ ಮುಗಿಸುವುದು.
- **ತಂಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ:** ತಂಡಕಾರ್ಯದ ಕೌಶಲ್ಯ ಎಂದರೆ ಗುಂಪು ಅಧ್ಯಯನ ಮತ್ತು ಪ್ರಾಜೆಕ್ಟ್‌ಗಳಲ್ಲಿ ಸಹಕಾರ ನೀಡುವುದು, ವಿಭಿನ್ನ ಅಭಿಪ್ರಾಯಗಳನ್ನು ಗೌರವಿಸುವ ಅಭ್ಯಾಸ ಬೆಳೆಸಿಕೊಳ್ಳುವುದು ಹಾಗೂ ವೃತ್ತಿ ಜೀವನದಲ್ಲಿ ತಂಡದೊಂದಿಗೆ ಸಮರ್ಥವಾಗಿ ಕೆಲಸ ಮಾಡುವ ಸಾಮರ್ಥ್ಯ ಹೊಂದಿರುವುದು.
- **ಸಕಾರಾತ್ಮಕ ಚಿಂತನೆ:** ಆತ್ಮವಿಶ್ವಾಸ, ಧೈರ್ಯ ಮತ್ತು ಪ್ರೇರಣೆ ಜೀವನದಲ್ಲಿ ಯಶಸ್ಸು ಸಾಧಿಸಲು ಅಗತ್ಯವಾಗಿದ್ದು, ಇದು ವಿಫಲತೆಯನ್ನು ಎದುರಿಸುವ ಮನೋಬಲವನ್ನು ಬೆಳೆಸುತ್ತದೆ.
- **ಸೃಜನಶೀಲತೆ:** ನವೀನತೆ ಮತ್ತು ಆವಿಷ್ಕಾರ ಕೌಶಲ್ಯ ಎಂದರೆ ಹೊಸ ಆಲೋಚನೆಗಳನ್ನು ರೂಪಿಸುವ ಸಾಮರ್ಥ್ಯ ಹೊಂದುವುದಾಗಿದೆ. ಕಲಿಕೆ ಮತ್ತು ಪ್ರಾಜೆಕ್ಟ್‌ಗಳಲ್ಲಿ ಹೊಸ ವಿಧಾನಗಳನ್ನು ಪ್ರಯೋಗಿಸುವುದು ಉದ್ಯೋಗದಲ್ಲಿ ನವೀನತೆ ಹಾಗೂ ಆವಿಷ್ಕಾರದ ಸಾಧನೆಗೆ ಸಹಕಾರಿಯಾಗುತ್ತದೆ.
- **ಹೊಂದಿಕೊಳ್ಳುವಿಕೆ:** ವಿದ್ಯಾರ್ಥಿ ಜೀವನದಲ್ಲಿ ಕೌಶಲ್ಯಾಭಿವೃದ್ಧಿ ಎಂದರೆ ಕೇವಲ ಶೈಕ್ಷಣಿಕ (ಅಕಾಡೆಮಿಕ್) ಜ್ಞಾನವಷ್ಟೇ ಅಲ್ಲ; ಅದು ವ್ಯಕ್ತಿತ್ವ, ನಡವಳಿಕೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವ ಪ್ರಕ್ರಿಯೆಯಾಗಿದೆ. ಸಂವಹನ, ನಾಯಕತ್ವ, ಸಮಸ್ಯೆ ಪರಿಹಾರ, ಸಮಯ ನಿರ್ವಹಣೆ, ತಂಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ, ಸಕಾರಾತ್ಮಕ ಚಿಂತನೆ ಹಾಗೂ ಸೃಜನಶೀಲತೆ–ಈ ಎಲ್ಲಾ ಕೌಶಲ್ಯಗಳು ವಿದ್ಯಾರ್ಥಿಯನ್ನು ಸಮಗ್ರ ವ್ಯಕ್ತಿಯಾಗಿ ರೂಪಿಸುತ್ತವೆ. ಇವು ಜೀವನದ ಪ್ರತಿಯೊಂದು ಹಂತದಲ್ಲಿ ಯಶಸ್ಸು ಸಾಧಿಸಲು ದಾರಿದೀಪವಾಗುತ್ತವೆ. ಆದ್ದರಿಂದ, ವಿದ್ಯಾರ್ಥಿ ಜೀವನದಲ್ಲಿಯೇ ಇಂತಹ ಮೃದು ಕೌಶಲ್ಯಗಳನ್ನು (Soft Skills) ಬೆಳೆಸಿಕೊಳ್ಳುವುದು ಭವಿಷ್ಯದ ಉತ್ತಮ ವೃತ್ತಿ, ಸಮೃದ್ಧ ವ್ಯಕ್ತಿತ್ವ ಮತ್ತು ಸಮಾಜಮುಖಿ ಜೀವನಕ್ಕೆ ಅತ್ಯಂತ ಅಗತ್ಯ. ■